ಜನಪದ ಪ್ರಕಾಶ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೪ ಏಪ್ರಿಲ್-೨೦೦೪ ಸಂಚಿಕೆ-೯



ಡಾ॥ ಅಂಬೇಡ್ಕರ್ ಗಾಂಧೀಜಿಯಿಂದ ದೂರವಲ್ಲ, ಹತ್ತಿರ

* ಈ ಸಂಚಿಕೆಯಲ್ಲಿ *

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಏಪ್ರಿಲ್-೨೦೦೪
ಸಂಪುಟ ೪
ಸಂಚಿಕೆ ೯

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☏ ೦೮೨೩೬ ೨೯೮೭೫೪
e-mail - janapada@yahoo.com

ಬರ

ಏತಕೀ ನಡುಹಗಲ ಹಕ್ಕಿ
ತೆರೆದಿದೆ ಭೀಷಣದ ಅಕ್ಷಿ
ವಿಸ್ಫುಲಿಂಗವ ಸುರಿಸುತಿದೆ
ಭುವಿಬಾಳ ಮುಕ್ಕಿ
ಯಾವ ಪಾಪದ ಫಲಿತ
ಪಶುಪಕ್ಷಿ ಪ್ರಾಣಿಗಳ ಸುಲಿತ
ಬೆಂದು ಬೀಳುತಿದೆ ಪರ್ಣತೇರಿನ ಯಾತ್ರೆ
ಅನ್ನವಿಕ್ಕುವ ಕೈಯ ಸಹಿತ॥

ಆಸೆಗಳು ನೂರು ಕಮರುತಿವೆ
ಪ್ರೀತಿಯ ಒರತೆ ಬತ್ತುತಿದೆ
ಉತ್ಸಾಹಜಲಧಿ ಇಂಗುತಿದೆ
ನಿಂತ ನೆಲ ಕುದಿಕುದಿಯುತಿದೆ
ಇನ್ನಿಲ್ಲವೊ ಆ ಬಾಳ ಮಿಂಚು
ಸ್ವರ್ಗವೇರ್ವ ಮಹದ ಮನಸು
ಇಳಿದು ಬರದಲ್ಲಿಂದ ಕುದಿವೆದೆಯ
ತಣಿಸುವ ವರ್ಷಧಾರೆಯ ಸೊಗಸು॥

ಯಾವ ಭಸ್ಮಾಸುರನ ಸುಡಲಿಂಥ
ಧಿಂಧೀಕಿತ ಪ್ರಳಯನೃತ್ಯ
ಸಂಚುಗೈದಂತಿದೆ ತನ್ನಣುಗನ
ತಾನೆ ನುಂಗುವ ಮಾರ್ಜಾಲದವಕೃತ್ಯ
ಮನದ ಬೇಲಿಯ ಒಳಗೆ ಸದ್ದಿಲ್ಲದೆ
ಸರಿಯುತಿದೆ ಭಯದ ಸರೀಸೃಪ
ಹೆತ್ತಮ್ಮನ ಕರ ತರಿದು ಮುಡಿಯಂದನಿಳಿಸಿ
ಎದೆಗಿರಿದ ಬಾಳಾಯಿತು ಬರಡು ಕೂಪ.॥

-ಡಾ॥ ಬೋರೇಗೌಡ ಚಿಕ್ಕಮರಳಿ

ವಿಚಾರ ದೀಪ್ತಿ

ಧರ್ಮದಲ್ಲಿ ಮೂರ್ತಿಪೂಜೆ ಇದೆ, ರಾಜಕೀಯದಲ್ಲಿ ವ್ಯಕ್ತಿ ಪೂಜೆ ಇದೆ. ಭಾರತದ ರಾಜಕೀಯ ಜೀವನದಲ್ಲಿ ವ್ಯಕ್ತಿ ಪೂಜೆ ಒಂದು ಸತ್ಯ ಸಂಗತಿಯಾಗಿರುವುದು ದುರದೃಷ್ಟಕರ. ವ್ಯಕ್ತಿಪೂಜೆ, ಪೂಜಕರನ್ನು ಭ್ರಷ್ಟಗೊಳಿಸುವುದಲ್ಲದೆ ದೇಶಕ್ಕೆ ಅಪಾಯ ಕಾರಿಯಾಗಿದೆ. ನೀವು ಪೂಜಿಸುವ ಮುನ್ನ ಆತನು ನಿಜವಾಗಿಯೂ ಶ್ರೇಷ್ಠನಾಗಿದ್ದಾನೆಯೇ ಎಂದು ತಿಳಿದುಕೊಳ್ಳುವ ಬಗ್ಗೆ ನೀಡಲಾಗಿರುವ ಎಚ್ಚರಿಕೆಯನ್ನು ನಾನು ಸ್ವಾಗತಿಸುತ್ತೇನೆ. ಆದರೆ ದುರದೃಷ್ಟವೆಂದರೆ ಇದು ಸುಲಭದ ಕೆಲಸವಲ್ಲ. ಏಕೆಂದರೆ ಇಂದಿನ ದಿನಗಳಲ್ಲಿ ಪತ್ರಿಕೆಗಳನ್ನು ತಮ್ಮ ಕೈಯಲ್ಲಿಟ್ಟುಕೊಂಡು ಮಹಾಪುರುಷರನ್ನು ಕಾರ್ಖಾನೆಗಳಲ್ಲಿ ಮಾಡಿದಂತೆ ತಯಾರು ಮಾಡುವುದು ಸುಲಭ. ಕಾರ್ಲೈನು ಇತಿಹಾಸದಲ್ಲಿ ಆಗಿ ಹೋದ ಅನೇಕ ಮಹಾಪುರುಷರನ್ನು 'ಬ್ಯಾಂಕು ನೋಟು'ಗಳೆಂದು ವರ್ಣಿಸಿರುವುದು ಸೂಕ್ತವಾಗಿದೆ. ಬ್ಯಾಂಕು ನೋಟುಗಳಂತೆ ಅವರೂ ಬಂಗಾರದ ಪ್ರತೀಕಗಳು ಅವು ಖೊಟ್ಟಿ ನೋಟು ಗಳಲ್ಲವೆಂಬ ಅಂಶವನ್ನು ನಾವು ಖಾತ್ರಿ ಮಾಡಿಕೊಳ್ಳಬೇಕು. ಮಹಾಪುರುಷರನ್ನು ಪೂಜಿಸುವಾಗ ನಾವು ಹೆಚ್ಚು ಜಾಗರೂಕರಾಗಿರಬೇಕೆಂಬುದನ್ನು ನಾನು ಒಪ್ಪುತ್ತೇನೆ. 'ಕಿಸೆಗಳ್ಳರಿಂದ ಎಚ್ಚರಿಕೆ' ಎಂಬ ಫಲಕಗೊಂದಿಗೆ 'ಮಹಾ ಪುರುಷರಿಂದ ಎಚ್ಚರಿಕೆ' ಎಂಬ ಫಲಕವನ್ನೂ ಹಾಕುವ ಪರಿಸ್ಥಿತಿ ಉಂಟಾಗಿದೆ.

–ಡಾ॥ಬಿ.ಆರ್.ಅಂಬೇಡ್ಕರ್.

ಮೂಲ– ಡಾ॥ ಬಿ.ಆರ್. ಅಂಬೇಡ್ಕರ್ ಬರಹ, ಭಾಷಣಗಳು, ಪುಟ ೩೨೦ (ಸಂಪುಟ–೧)

ಡಾ|| ಅಂಬೇಡ್ಕರ್ ಗಾಂಧಿಯಿಂದ ದೂರವಲ್ಲ ಹತ್ತಿರ

–ಸುರೇಂದ್ರ ಕೌಲಗಿ

(ಏಪ್ರಿಲ್ ೧೪ರ ಡಾ|| ಬಿ. ಆರ್. ಅಂಬೇಡ್ಕರರ ಜಯಂತಿ. ಆ ನಿಮಿತ್ತ ಈ ಲೇಖನ.)

೧೯೨೪ರ ಸುಮಾರಿನಲ್ಲಿ ಡಾ|| ಅಂಬೇಡ್ಕರ್ "ಬಹಿಷ್ಕೃತ ಹಿತಕಾರಿಣೀ ಸಭಾ" ಎಂಬ ಸಂಸ್ಥೆಯನ್ನು ಸ್ಥಾಪಿಸುವುದರ ಮೂಲಕ ಹಿಂದೂ ಸಮಾಜದಲ್ಲಿ ಬಹು ಪುರಾತನ ಕಾಲದಿಂದಲೂ ಪ್ರಚಾರದಲ್ಲಿದ್ದ ಅಸ್ಪೃಶ್ಯತೆಯ ಆಚರಣೆಯ ವಿರುದ್ಧವಾಗಿ ಮೊಟ್ಟಮೊದಲ ಬಾರಿಗೆ ಸಂಘಟಿತ ರೂಪದಲ್ಲಿ ತಮ್ಮ ಧ್ವನಿಯನ್ನು ಎತ್ತಿದರು. ಅಂದಿನಿಂದ ಅವರು ೧೯೫೬ರಲ್ಲಿ ತೀರಿಕೊಳ್ಳುವವರೆಗೂ ೩೨ ವರ್ಷಗಳ ಕಾಲ ದೀರ್ಘವಾಗಿ ಏಕಪ್ರಕಾರವಾಗಿ, ಕಿಂಚಿತ್ತೂ ಆಯಾಸಪಡದೆ, ಧೈರ್ಯಗುಂದದೆ ಅಸ್ಪೃಶ್ಯತೆಯಂಥ ಕುಸಾಮಾಜಿಕ ಪದ್ಧತಿಯ ವಿರುದ್ಧ ಹೋರಾಡಿದರು. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರವೂ ಎಂಟು ವರ್ಷಗಳ ಕಾಲ ತಮ್ಮ ಹೋರಾಟವನ್ನು ನಡೆಸಿದರು. ಇಷ್ಟೊಂದು ಧೀರ್ಘಕಾಲ ವಿವಿಧ ರೀತಿಗಳಲ್ಲಿ ಹೋರಾಟ ನಡೆಸಿದರೂ ಹಿಂದೂ ಧರ್ಮ ಅಸ್ಪೃಶ್ಯತೆಯಿಂದ ಮುಕ್ತಗೊಳ್ಳದೇ ಇದ್ದುದನ್ನು ಕಂಡು ಅವರಿಗೆ ಬೇಸರವಾದ ಕಾರಣ ಮತ್ತು ತಮ್ಮ ಪ್ರತಿಭಟನೆಯ ಕೊನೆಯ ಅಸ್ತ್ರವೆಂದು ಅಂಬೇಡ್ಕರ್ ತಮ್ಮ ಪತ್ನಿ ಸವಿತಾರೊಂದಿಗೆ ಹಿಂದೂ ಧರ್ಮವನ್ನು ತ್ಯಜಿಸಿ ಭೌದ್ದ ಧರ್ಮವನ್ನು ಸ್ವೀಕರಿಸಿದರು.

ಅಂಬೇಡ್ಕರ್ ತಮ್ಮ ಅರವತ್ತೈದು ವರ್ಷಗಳ ಕಾಲದ ಅಸ್ಪೃಶ್ಯತಾ ವಿರುದ್ದದ ಹೋರಾಟದಲ್ಲಿ ಬರೆದ ಲೇಖನಗಳು, ಮಾಡಿದ ಭಾಷಣಗಳು, ಮಂಡಿಸಿದ ಮನವಿಗಳು ಅಹವಾಲುಗಳ ಸಂಖ್ಯೆ ಸಾಮಾನ್ಯ ಮನುಷ್ಯನ ಲೆಕ್ಕಕ್ಕೆ ಮತ್ತು ಸಾಮರ್ಥ್ಯಕ್ಕೆ ಮೀರಿದಷ್ಟಾಗಿವೆ. ಅವೆಲ್ಲವೂ ವಿದ್ವತ್ಪೂರ್ಣವಾಗಿವೆ. ಅವರು ಬರೆದ ಒಂದೊಂದು ಲೇಖನವೂ ಡಾಕ್ಟರೇಟ್ ಪಡೆಯ ಬಹುದಾದಂಥ ಗುಣಮಟ್ಟದಲ್ಲಿವೆ. ಅವೆಲ್ಲವೂ ಐತಿಹಾಸಿಕ ಘಟನೆಗಳಿಂದಲೂ ಸಂಖ್ಯೆಗಳಿಂದಲೂ, ಹಿರಿಯ ತತ್ವಜ್ಞಾನಿಗಳ ಮಾತುಗಳಿಂದಲೂ ತುಂಬಿತುಳುಕಾಡುತ್ತವೆ. ಅಲ್ಲಲ್ಲಿ ಅನೇಕ ವೈರುಧ್ಯಗಳಿದ್ದರೂ ಅವರು ನಿರ್ಮಿಸಿದ ಸಾಹಿತ್ಯ ಹಗುರವಾಗಿ ಪರಿಗಣಿಸುವಂತಿಲ್ಲದವಾಗಿದ್ದವು. ಹೀಗೆ ಅಂಬೇಡ್ಕರ್ ತಮ್ಮ ಏಕ ನಿಷ್ಠತೆಯ

ಹೋರಾಟದ ಮೂಲಕ ಹಿಂದೂ ಧರ್ಮದಲ್ಲಿಯ ಬಹುದೊಡ್ಡ ಸಂಖ್ಯೆಯ ದಲಿತರಿಗೆ-ಶೂದ್ರರಿಗೆ-ಅಸ್ಪೃಶ್ಯರಿಗೆ-ಹರಿಜನರಿಗೆ ಅವರದೇ ಮಾತೃಭೂಮಿಯಾದ ಭಾರತ ದೇಶದ ಜನಜೀವನದಲ್ಲಿ ಗೌರವದ, ಸಮಾನತೆಯ ಮತ್ತು ಸ್ವಾತಂತ್ರ್ಯದ ಸ್ಥಾನವನ್ನು ದೊರಕಿಸಿಕೊಟ್ಟರು; ತುಳಿಯಲ್ಪಟ್ಟವರೂ, ಶೋಷಿತರೂ ಆಗಿದ್ದಂಥ ಮೂಕ ಜನರಿಗೆ ಧ್ವನಿಯನ್ನು ಕೊಟ್ಟರು. ಅವರಲ್ಲಿ ಆತ್ಮಗೌರವ ಮತ್ತು ಆತ್ಮವಿಶ್ವಾಸವನ್ನು ಮೂಡಿಸಿದರು. ಇಂಥ ದೊಡ್ಡ ಸಾಮಾಜಿಕ ಕ್ರಾಂತಿಕಾರಿ ಪುರುಷನಿಗೆ 'ಭಾರತ ರತ್ನ' ಪದವಿಯನ್ನು ಕೊಟ್ಟು ಗೌರವಿಸಿದ್ದು ಸೂಕ್ತವೇ ಆಗಿದೆ. ಅಸ್ಪೃಶ್ಯತೆಯ ನಿವಾರಣೆಯ ಕಾರ್ಯದಲ್ಲಿ ಡಾ|| ಅಂಬೇಡ್ಕರ್‌ರ ಸಮಕಾಲೀನ ಇನ್ನೊಬ್ಬ ವ್ಯಕ್ತಿ ಗಾಂಧೀ.

ಗಾಂಧೀ ಮಹಾತ್ಮನಾಗುವುದಕ್ಕಿಂತ ಎಷ್ಟೋ ವರ್ಷಗಳ ಮೊದಲೇ ಅಂದರೆ ಕೇವಲ ಹನ್ನೆರಡು ವರ್ಷದ ಬಾಲಕನಾಗಿದ್ದಾಗ ಮನೆಯಲ್ಲಿ ತಾಯಿ ಆಚರಿಸುತ್ತಿದ್ದ ಅಸ್ಪೃಶ್ಯತೆಯ ವಿರುದ್ಧ ೧೮೮೧ರಲ್ಲಿ ಧ್ವನಿ ಎತ್ತಿದ್ದರು. ಗಾಂಧೀ ಮತ್ತು ಅಂಬೇಡ್ಕರ್ ೬೫ ವರ್ಷಗಳ ಕಾಲ ಸಮಕಾಲೀನರಾಗಿ ಸಮಾನ ಮನಸ್ಕರಾಗಿ, ಸಮಾನ ಗಮ್ಯವುಳ್ಳವರಾಗಿ ಕೆಲಸಮಾಡಿದ್ದರೂ ಸಹ ಅಂಬೇಡ್ಕರೋತ್ತರ ಭಾರತದಲ್ಲಿ, ಗಾಂಧೀಯೋತ್ತರ ಭಾರತದಲ್ಲಿಯ ಅವರ ಅನುಯಾಯಿಗಳು ಮತ್ತು ಅವರ ಅಭಿಮಾನಿಗಳು ಗಾಂಧೀ ವಿರುದ್ಧ ಅಂಬೇಡ್ಕರರನ್ನೂ, ಅಂಬೇಡ್ಕರರ ವಿರುದ್ಧ ಗಾಂಧೀಯನ್ನೂ ಅರ್ಥೈಸುವ ಪ್ರಯತ್ನ ಮಾಡಿದ್ದಾರೆ. ಗಾಂಧೀ ಮತ್ತು ಅಂಬೇಡ್ಕರ್ ಭಾರತದ ಜನಜೀವನದಲ್ಲಿ ಲೀನರಾಗಿ ನಾಲ್ಕು ದಶಕಗಳು ಕಳೆದಿದ್ದರೂ ಇನ್ನೂ ಅಂಥದೇ ಪ್ರಯತ್ನದಲ್ಲಿರುವ ಅವರ ಅನುಯಾಯಿಗಳು ಅವರಿಬ್ಬರು ಹೊಂದಿದ್ದ ಶುದ್ಧ ಹಿಂದೂಸಮಾಜದ ರಚನೆಯ ಗುರಿಗೆ ಅವ್ಯಾಹತವಾಗಿ ಆಘಾತವನ್ನುಂಟುಮಾಡುತ್ತಿದ್ದಾರೆ.

ಗಾಂಧೀ ಮತ್ತು ಅಂಬೇಡ್ಕರರ ಜೀವನ, ಅವರ ವಿಚಾರ ಮತ್ತು ಹೋರಾಟ ಇತ್ಯಾದಿಗಳನ್ನು ಮುಕ್ತ ಮನಸ್ಸಿನಿಂದ, ಪೂರ್ವಾಗ್ರಹ ಪೀಡನೆಯಿಂದ ಮುಕ್ತರಾಗಿ, ವ್ಯಕ್ತಿ ಆರಾಧನೆಯ ಚೌಕಟ್ಟಿನಿಂದ ಹೊರಬಂದು ಅಧ್ಯಯನ ಮಾಡಿದಲ್ಲಿ ನಮಗೆ ಸ್ಪಷ್ಟವಾಗಿ ಗೋಚರಿಸುವುದೇನೆಂದರೆ ಅಂಬೇಡ್ಕರ್ ಮತ್ತು ಗಾಂಧೀ ಅಸ್ಪೃಶ್ಯತೆಯೆಂಬ ದಾನವನನ್ನು ಸಂಹರಿಸಲು ಹೊರಟಿರುವ ಒಂದೇ ವೇಗದ ಎರಡು ಬಾಣಗಳಂತಿದ್ದಾರೆ.

ಎಲ್ಲಿಯವರೆಗೆ ಮನುಷ್ಯನಲ್ಲಿ ಚಿಂತನಾ ಸಾಮರ್ಥ್ಯವಿರುತ್ತದೋ

ಅಲ್ಲಿಯವರೆಗೆ ಭಿನ್ನಾಭಿಪ್ರಾಯವೆಂಬುದು ಸಹ ಇರುತ್ತದೆ. ಹೊಸ-ಹೊಸ ರೂಪದ ಚಿಂತನೆ ಅವನ ಬೆನ್ನಿಗಂಟಿಕೊಂಡೇ ಇರುತ್ತದೆ. ಇದರ ಪರಿಣಾಮವಾಗಿ ಚಿಂತನೆ ಎಂಬ ಸಮುದ್ರದಲ್ಲಿ ಮಂಥನವಾಗುತ್ತದೆ. ತದನಂತರ ಹಲಾಹಲ, ಅಮೃತ ಇತ್ಯಾದಿ ಮಹತ್ತರ ವಸ್ತುಗಳು ಪ್ರಾಪ್ತವಾಗುತ್ತವೆ. ಇಲ್ಲಿ ನಮಗೆ ಮುಖ್ಯವಾಗಿರುವುದು ಅಂಬೇಡ್ಕರ್ ಹಾಗೂ ಗಾಂಧೀ ಇಟ್ಟುಕೊಂಡಿದ್ದ ಉದ್ದೇಶ್ಯ. ಅವರಿಬ್ಬರ ಉದ್ದೇಶ್ಯ ಒಂದೇ ಆಗಿತ್ತೆಂಬುದು ಅವರ ಮಾತುಗಳಲ್ಲಿ ಸ್ಪಷ್ಟವಾಗಿ ಕಾಣಬರುತ್ತದೆ.

ಅಂಬೇಡ್ಕರರಿಗಿಂತ ಗಾಂಧೀ ೨೨ವರ್ಷದಷ್ಟು ದೊಡ್ಡವರಾಗಿದ್ದರಿಂದ ಅವರ ಹಿರಿತನದ ಆಧಾರದ ಮೇಲೆ ಗಾಂಧೀಯವರ ಈ ಮಾತುಗಳನ್ನು ಮೊದಲು ಗಮನಿಸೋಣ.

"ಈ ಅಸ್ಪೃಶ್ಯತಾ ನಿವಾರಣೆಯ ಕಾರ್ಯ ನನ್ನ ದೃಷ್ಠಿಯಲ್ಲಿ ಮುಖ್ಯವಾಗಿ ಒಂದು ಧಾರ್ಮಿಕ ಕಾರ್ಯ, ಇದರಿಂದ ಇತರ ಪರಿಣಾಮಗಳಾಗುವುವೆಂಬುದು ಅಷ್ಟೇ ನಿಜವಾಗಿಯೂ ಧಾರ್ಮಿಕ ಕಾರ್ಯ. ಇದರಿಂದ ಇತರ ಪರಿಣಾಮಗಳಾಗುವವೆಂಬುದು ಅಷ್ಟೇ ನಿಜ. ನಿಜವಾಗಿಯೂ ಧಾರ್ಮಿಕ ಕಾರ್ಯವೆನಿಸಿಕೊಳ್ಳುವ ಯಾವ ಒಂದು ಕಾರ್ಯವೂ ಬಾಳಿನ ಇತರ ಅನೇಕ ವಿಭಾಗಗಳ ಮೇಲೆ ಪ್ರಭಾವ ಬೀರದೆ ಇರುವುದಿಲ್ಲ. ಯಾವುದೇ ಒಂದು ದೊಡ್ಡ ಧಾರ್ಮಿಕ ಆಂದೋಲನವನ್ನು ಗುರುತಿಸಲು ಇರುವ ಪರೀಕ್ಷೆಗಳಲ್ಲಿ ಬಹುಶಃ ಅದೂ ಒಂದು ಎನ್ನಬಹುದು. ಅತ್ಯಂತ ವಿನೀತನಾಗಿ ಆದರೆ ಪೂರ್ಣ ನಂಬಿಕೆಯಿಂದ ಇಷ್ಟನ್ನು ಹೇಳಬಯಸುತ್ತೇನೆ. ನಾನು ಈ ಆಂದೋಲನವನ್ನು ಬೇರೆ ಯಾವುದೇ ಧರ್ಮ ಅಥವಾ ಜಾತಿಯ ವಿರುದ್ಧದ ಭಾವದಿಂದ ಆರಂಭಿಸಿಲ್ಲ. ಕಳೆದ ಐವತ್ತು ವರ್ಷಗಳಲ್ಲಿ ನನ್ನ ಯಾವುದೇ ಒಂದು ಕೆಲಸ ಬೇರೆ ಯಾವ ವ್ಯಕ್ತಿ ಅಥವಾ ಜಾತಿಯ ವಿರುದ್ಧ ನಡೆದುದೆಂದು ತೋರಿಸಲು ಸಾಧ್ಯವೇ ಇಲ್ಲ. ನಾನು ಯಾರನ್ನೂ ಎಂದೂ ನನ್ನ ಶತ್ರುವೆಂದು ನಂಬಿಲ್ಲ. ಯಾರನ್ನೂ ಆ ರೀತಿ ಭಾವಿಸಬಾರದೆಂಬುದೇ ನನ್ನ ಮತ. ಜೀವಂತವಾಗಿರುವ ಯಾವುದಕ್ಕೂ ನಾನು ಕೇಡನ್ನು ಬಯಸುವುದಿಲ್ಲ. ಹಿಂದೂಗಳ ಹೃದಯ ಅಸ್ಪೃಶ್ಯತೆಯ ಕಳಂಕದಿಂದ ಪೂರ್ಣವಾಗಿ ಶುದ್ಧವಾದರೆ ಅದು ಭಾರತದ ಎಲ್ಲ ಜಾತಿಗಳ ಮೇಲೂ ಅನಿವಾರ್ಯ ಪ್ರಭಾವವನ್ನು ಬೀರುವುದಲ್ಲದೆ ಇಡಿಯ ಜಗತ್ತಿನ ಮೇಲೂ ಪ್ರಭಾವವನ್ನು ಬೀರಬಲ್ಲದು, ಎಂಬುದು ಧೃಡವಾದ ನಂಬಿಕೆ. ಈ ನಂಬಿಕೆ ನನ್ನಲ್ಲಿ ದಿನಕಳೆದಂತೆ ಹೆಚ್ಚುತ್ತಿದೆ. ಹಿಂದೂಗಳ ಹೃದಯದಿಂದ ಮೇಲು ಮತ್ತು ಕೀಳು ಎಂಬ ತಾರತಮ್ಯವನ್ನು

ತೊಡೆದು ಹಾಕುವ ಕ್ರಿಯೆಯೇ ನಮ್ಮಲ್ಲಿರುವ ಪರಸ್ಪರ ಅಸೂಯೆಗಳನ್ನೂ ಮತ್ತು ಇತರ ಜಾತಿಗಳ ಬಗೆಗಿನ ಅಪನಂಬಿಕೆಗಳನ್ನೂ ಇಲ್ಲದಂತೆ ಮಾಡಬೇಕು. ಈ ಕಾರಣದಿಂದಲೇ ಈ ಉದ್ದೇಶಕ್ಕೆ ನನ್ನ ಬಾಳನ್ನು ಪಣವಾಗಿ ಇಟ್ಟಿದ್ದೇನೆ. ಅಸ್ಪೃಶ್ಯತೆಯ ವಿರುದ್ಧ ನಡೆಸುವ ನನ್ನ ಈ ಹೋರಾಟದ ಮೂಲಕ ಹಿಂದೂ ಸ್ಪಶ್ಯರು ಮತ್ತು ಹಿಂದೂ ಅಸ್ಪೃಶ್ಯರು ಇವರುಗಳ ನಡುವೆ ಮಾತ್ರವೇ ಅಲ್ಲದೆ ಹಿಂದೂಗಳು, ಮುಸ್ಲಿಮರು, ಕ್ರೈಸ್ತರು ಹಾಗೂ ಇತರ ಭಿನ್ನಮತೀಯ ಪಂಥಗಳವರೊಡನೆಯೂ ಐಕ್ಯ ಸಾಧಿಸಲುಯತ್ನಿಸುತ್ತಿದ್ದೇನೆ. ಹಿಂದೂಗಳ ಸಂಖ್ಯಾಶಕ್ತಿಯಲ್ಲಿ ನಾನು ಆಸಕ್ತಿಯುಳ್ಳವನಾಗಿದ್ದೇನೆಂಬುದನ್ನು ನೀವು ಸ್ವಲ್ಪವೂ ನಂಬಬೇಡಿ. ನಾನು ಯಾವಾಗಲೂ ಗಾತ್ರವನ್ನು ಬದಿಗೊತ್ತಿ ಗುಣವನ್ನೇ ಎತ್ತಿ ಹಿಡಿದಿದ್ದೇನೆ.ನಾನು ಹತ್ತು ಲಕ್ಷ ಖೋಟಾನಾಣ್ಯವನ್ನು ಶೇಖರಿಸಿದರೆ ಅದು ನನಗೆ ಬೆಲೆಯಿಲ್ಲದ ಹೊರೆಯಾಗುತ್ತದೆ. ಅದಕ್ಕೆ ಪ್ರತಿಯಾಗಿ ಒಂದು ಸಾಚಾ ನಾಣ್ಯ ತನ್ನ ಬೆಲೆಯನ್ನು ಹೊಂದಿರುತ್ತದೆ. ಒಂದು ಮತಧರ್ಮದ ಅನುಯಾಯಿಗಳು ಅದರ ತತ್ವಗಳನ್ನು ತಮ್ಮ ಜೀವನದಲ್ಲಿ ನಿರಾಕರಿಸಿ, ಕೇವಲ ಹೆಸರಿಗೆ ಮಾತ್ರ ಎಷ್ಟು ಸಂಖ್ಯೆಯಿಂದ ಇದ್ದರೂ ಅದನ್ನು ರಕ್ಷಿಸಲಾರರು. ಈ ಪ್ರಸಿದ್ಧ ಹಿಂದೂ ಧರ್ಮ ಇಂಥ ಲಕ್ಷಾಂತರ ಅನುಯಾಯಿಗಳಿಂದ ಕೂಡಿದ್ದರೂ ಅಸ್ಪೃಶ್ಯತೆಯ ಪಾಪವನ್ನು ತನ್ನಲ್ಲಿ ಬಚ್ಚಿಟ್ಟುಕೊಂಡು ಮುಂದುವರೆದರೆ, ನಾಶವೇ ಆದೀತದ. ಇದು ಅಸ್ಪೃಶ್ಯರು ಲಕ್ಷಾಂತರ ಮಂದಿ ಇರುವರೆಂಬ ಕಾರಣಕ್ಕಲ್ಲ. ಅವರು ಒಂದೇ ಹಿಡಿ ಜನ ಇದ್ದರೂ ಅದು ನಾಶವಾದೀತು. ಹಾಲಿಗೆ ಗೌರೀಪಾಷಾಣವನ್ನು ಸ್ವಲ್ಪ ಹಾಕಿರಲಿ ಅಥವಾ ಹೆಚ್ಚು ಹಾಕಿರಲಿ, ಅದು ವಿಷಪೂರಿತವಾಗುವುದರಿಂದ ಅದನ್ನು ಚೆಲ್ಲಿಬಿಡಬೇಕು. ನಾವೆಲ್ಲ ಒಬ್ಬನೇ ದೇವನ ಮಕ್ಕಳೆಂದು ನಂಬುವುದಾದರೆ ಆ ದೇವರು ಸತ್ಯ ಮತ್ತು ನ್ಯಾಯ ಸ್ವರೂಪನೆನ್ನುವುದಾದರೆ ಅವನ ಮಕ್ಕಳಾದ ನಮ್ಮಲ್ಲಿ ಅಸ್ಪೃಶ್ಯತೆ ಹೇಗೆ ಇರಲು ಸಾಧ್ಯ? ಸತ್ಯ ಮತ್ತು ನ್ಯಾಯಗಳ ಸ್ವರೂಪಿಯಾದ ದೇವರು ತನ್ನ ಸ್ವಂತ ಮಕ್ಕಳಲ್ಲಿ ಮೇಲು-ಕೀಳು ಎಂಬ ತಾರತಮ್ಯಗಳನ್ನು ಎಂದಿಗೂ ಸೃಷ್ಠಿಸಲಾರ. ಆದುದರಿಂದ ನಾವೆಲ್ಲ ಶಾಂತಿ ಮತ್ತು ಸ್ನೇಹಭಾವದಿಂದ ಜೀವಿಸುವ ಸಲುವಾಗಿ, ಎಲ್ಲರೂ ಕುಲ ಮತ್ತು ಮತಧರ್ಮಗಳ ವ್ಯತ್ಯಾಸವಿಲ್ಲದೆ, ಈ ಮಹಾ ಆಂದೋಲನಕ್ಕೆ ನೆರವಿತ್ತು ಇದರ ಪೂರ್ಣ ಯಶಸ್ಸಿನ ಸಲುವಾಗಿ ಪ್ರಾರ್ಥಿಸ ಬೇಕೆಂದು ಆಹ್ವಾನಿಸುತ್ತೇನೆ''.

೧೯೩೧ರಲ್ಲಿ ಲಂಡನ್ನಿನಲ್ಲಿ ನಡೆದ ೨ನೇ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಗಾಂಧೀ ಹೋಗಿದ್ದರು. ಅದೇ

ಸಮ್ಮೇಳನದಲ್ಲಿ ಭಾಗವಹಿಸಲು ಅಂಬೇಡ್ಕರ್ ಸಹ ಹೋಗಿದ್ದರು. ಹಡಗಿನಲ್ಲಿ ಗಾಂಧೀಯನ್ನು ಪತ್ರಿಕಾಕರ್ತರು ಭೇಟಿಮಾಡಿ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದರು. ಅಂಥಹವರಲ್ಲಿ ಎಡಪಂಥೀಯ ಎಂ. ಸ್ಲೋಕಂಬ್ ಎಂಬುವವನು ಕೂಡ ಒಬ್ಬನು. ಅವನು ತನ್ನ ಪತ್ರಿಕೆಯಲ್ಲಿ ಪ್ರಿನ್ಸ ಆಫ್ ವೇಲ್ಸ್‌ಗೆ ಗಾಂಧೀ ಅಡ್ಡಬಿದ್ದರು ಎಂದು ಬರೆದಿದ್ದನು. ಅದಕ್ಕೆ ಉತ್ತರವಾಗಿ ಗಾಂಧೀ ಸ್ಲೋಕಂಬ್‌ಗೆ ಈ ರೀತಿ ಹೇಳಿದರು. 'ಕಡು ಬಡವನಾದ ಜಲಗಾರನ ಮುಂದೆ, ಕಡುಬಡವನಾದ ಭಾರತೀಯ ಅಸ್ಪೃಶ್ಯನ ಮುಂದೆ, ಮಂಡಿಯೂರುತ್ತೇನೆ. ಏಕೆಂದರೆ ಶತಮಾನಗಳಿಂದಲೂ ಅವರನ್ನು ಶೋಸುತ್ತಿರುವಂತವರಲ್ಲಿ ನಾನೂ ಭಾಗಿಯಾದುದಕ್ಕಾಗಿ, ನಾನವನ ಪಾದ ದೂಳಿಯನ್ನು ಒರೆಸುತ್ತೇನೆ ಪ್ರಿನ್ಸ ಆಫ್ ವೇಲ್ಸ್ ಮಾತು ಹಾಗಿರಲಿ, ನಾನು ನಿಮ್ಮ ರಾಜನ ಮುಂದೆಯೂ ಅಡ್ಡ ಬೀಳುವುದಿಲ್ಲ ಏಕೆಂದರೆ ಅವರು ನಿರಂಕುಶ ಶಕ್ತಿಯ ಪ್ರತಿನಿಧಿಯಾಗಿದ್ದಾರೆ. ಆನೆಯ ಕಾಲಿಗೆ ಕಟ್ಟಿತುಳಿಸಲಿ, ಅವರ ಮುಂದೆ ನಾನು ಅಡ್ಡ ಬೀಳುವುದಿಲ್ಲ ಆದರೆ ನಾನು ಅರಿಯದೆ ತುಳಿದ ಇರುವೆಯ ಮುಂದೆ ತಪ್ಪಾಯಿತೆಂದು ಕೊಂಡು ನಮಸ್ಕಾರ ಮಾಡಲು ಎಂದೂ ಸಿದ್ಧ'' ಎಂದರು ಗಾಧೀಜಿ

ಗಾಂಧೀಯವರ ಈ ಎಲ್ಲಾ ಮಾತನ್ನು ಓದಿದಾಗ ಈ ಕೆಳಗಿನ ಮಾತುಗಳು ನಮ್ಮ ಗಮನಕ್ಕೆ ಬರುತ್ತದೆ :-

೧) ಹಿಂದೂ ಧರ್ಮದಿಂದ ಅಸ್ಪೃಶ್ಯತೆಯನ್ನು ಕಡ್ಡಾಯವಾಗಿ ತೆಗೆದು ಹಾಕ ಬೇಕೆಂದು ಗಾಂಧೀ ಬಯಸಿದ್ದರು.

೨) ಗಾಂಧೀ ಯಾರನ್ನೂ ಎಂದೂ ತಮ್ಮ ಶತ್ರುವೆಂದು ನಂಬಿರಲಿಲ್ಲ ಆ ರೀತಿ ಭಾವಿಸಬಾರದೆಂಬುದು ಅವರ ಮತವಾಗಿತ್ತು.

೩) ಹಿಂದೂ ಸ್ಪೃಶ್ಯರು ಮತ್ತು ಹಿಂದೂ ಅಸ್ಪೃಶ್ಯರು ಇವರುಗಳ ನಡುವೆ ಮಾತ್ರವೇ ಅಲ್ಲದೆ ಹಿಂದೂಗಳು, ಮುಸ್ಲಿಂರು, ಕ್ರೈಸ್ತರು ಹಾಗೂ ಇತರ ಭಿನ್ನಮತೀಯ ಪಂಥಗಳವರೊಡನೆಯೂ ಐಕ್ಯ ಸಾಧಿಸುವ ಪ್ರಯತ್ನ ಗಾಂಧೀಯವರದಾಗಿತ್ತು.

೪) ಅಸ್ಪೃಶ್ಯರಲ್ಲಿಂಯೇ ಇದ್ದ ಅಸ್ಪೃಶ್ಯತಾಚರಣೆಯನ್ನೂ ತೆಗೆದುಹಾಕಬೇಕೆಂಬುದು ಸಹ ಗಾಂಧೀಯವರ ಉದ್ಯೇಶ್ಯವಾಗಿತ್ತು.

ಇನ್ನು ಡಾ|| ಅಂಬೇಡ್ಕರರ ವಿಚಾರವನ್ನು ತಿಳಿಯೋಣ

೧) ಜಾತಿಪದ್ಧತಿ ಹಿಂದೂಗಳನ್ನು ಹಾಳುಗೆಡವಿದೆ ೨) ಚಾತುರ್ವರ್ಣದ ಮೇರೆಗೆ ಹಿಂದೂ ಸಮಾಜವನ್ನು ಸಂಘಟಿಸುವುದು ಅಸಾಧ್ಯ. ೩) ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವವನ್ನೊಳಗೊಂಡ ಧರ್ಮವನ್ನು ಆಧರಿಸಿಯೆ

ಹಿಂದೂ ಸಮಾಜದ ಪುನರ್‌ನಿರ್ಮಾಣವಾಗತಕ್ಕದ್ದು. ಈ ಗುರಿಯನ್ನು ಸಾಧಿಸಬೇಕಾದರೆ ಜಾತಿ ಹಾಗೂ ವರ್ಣಗಳ ಬಗೆಗಿರುವ ಗೌರವ ಭಾವನೆ ನಷ್ಟವಾಗತಕ್ಕದ್ದು. ಹಿಂದೂ ಸಮಾಜಕ್ಕೆ ನೈತಿಕ ಪುನರ್ಜನ್ಮ ಈಗ ಅತ್ಯಂತ ಅವಶ್ಯಕವೆಂದು ನನಗೆ ತೋರುತ್ತದೆ. ಇದನ್ನು ಕೂಡಲೇ ಸಾಧಿಸದೆ ಮುಂದೂಡುವುದು ಅಪಾಯಕಾರಿಯಾದೀತು.

ಅಂಬೇಡ್ಕರ್‌ರ ಮತ್ತು ಗಾಂಧಿಯವರ ವಿಚಾರಗಳಲ್ಲಿ ಸಾಮ್ಯ ಎಷ್ಟಿದೆ ಮತ್ತು ಅದು ಎಷ್ಟು ತೀವ್ರತಮವಾಗಿದೆ ಎಂಬುದು ಮೇಲಿನ ಅವರಿಬ್ಬರ ಮಾತುಗಳಿಂದ ಸ್ಪಷ್ಟವಾಗುತ್ತದೆ.

ಹಿಂದೂ ಧರ್ಮವನ್ನು ಅಸ್ಪೃಶ್ಯತೆಯು ಪಾಪದಿಂದ ಮುಕ್ತ ಮಾಡಲೆಂದಲ್ಲವೆ ಗಾಂಧೀ ೧೯೩೨ ರಲ್ಲಿ ಯರವಾಡ ಜೈಲಿನಲ್ಲಿದ್ದುಕೊಂಡೇ ಆಮರಣಾಂತ ಉಪವಾಸ ಮಾಡಿ ಸನಾತನ ಹಿಂದೂಗಳ ಮನಸ್ಸನ್ನು ಮತ್ತು ವಿಚಾರವನ್ನು ಪರಿವರ್ತಿಸಿದ್ದು? ಗಾಂಧೀಯವರ ಈ ಉಪವಾಸದ ಕಾರಣದಿಂದಾಗಿ ಸಾವಿರಾರು ವರ್ಷಗಳಿಂದ ಅಸ್ಪೃಶ್ಯರಿಗೆ ಪ್ರವೇಶ ನಿಷೇಧವಿದ್ದ ಭಾರತದ ಎಲ್ಲಾ ದೇವಾಲಯುಗಳು ಅಸ್ಪೃಶ್ಯರಿಗೆ ತೆರೆಯಲ್ಪಟ್ಟದ್ದು? ಅಲ್ಲದೆ, ಅಸ್ಪೃಶ್ಯರಿಗೆ ಪ್ರವೇಶ ಬೇಕೆ, ಬೇಡವೆ ಎಂಬ ಬಗ್ಗೆ ಮತಹಾಕಲು ಹೇಳಿದಾಗ ಒಂದು ಮತಪೆಟ್ಟಿಗೆಯಲ್ಲಿ ಪ್ರವೇಶದ ಪರ ೨೪,೭೯೭ ಮತಗಳು ಮತ್ತು ವಿರೋಧವಾಗಿ ೪೪೫ ಮತಗಳು ಬಿದ್ದವು. ೬ ದಿನಗಳ ಕಠಿಣ ಉಪವಾಸದ ನಂತರ ಗಾಂಧೀ ಕುಮಾರಿ ಸ್ಲೇಡ್‌ಗೆ ಬರೆದ ಒಂದು ಪತ್ರದಲ್ಲಿ ತಮ್ಮ ಉಪವಾಸದ ಬಗ್ಗೆ ಹೀಗೆ ಹೇಳಿದ್ದಾರೆ. "ಅಸ್ಪೃಶ್ಯರು ಶತಮಾನಗಳಿಂದ ಅನುಭವಿಸಿದ ನೋವುಗಳೊಂದಿಗೆ ಹೋಲಿಕೆ ಮಾಡಿದರೆ ನನ್ನ ಉಪವಾಸ ತೀರಾ ಸಾಮಾನ್ಯವಾದುದು. ದೇವರನಾಮವನ್ನು ಗುಣಗುಡಿಸತ್ತಲೇ ಹೋಗುತ್ತೇನೆ. ದೇವರು ದೊಡ್ಡವನು ಮತ್ತು ದಯಾವಂತ".

ಉಪವಾಸಾನಂತರವೂ ಗಾಂಧೀ ಕಾರಾಗೃಹದಲ್ಲೆ ಉಳಿದರು. ತಮ್ಮ ಸಾಬರಮತಿ ಆಶ್ರಮವನ್ನು ಅಸ್ಪೃಶ್ಯರ ಒಂದು ಮಿತ್ರ ಮಂಡಳಿಗೆ ವಹಿಸಿಕೊಟ್ಟರು. ಅಲ್ಲದೆ ೧೦ ತಿಂಗಳಕಾಲ ಹರಿಜನೋದ್ಧಾರಕ್ಕಾಗಿ ಅವ್ಯಾಹತವಾಗಿ ಭಾರತ ದೇಶದಲ್ಲಿ ಸುತ್ತಿದರು. ಒಂದೇ ಒಂದು ದಿನದ ಮಟ್ಟಿಗೂ ಅವರು ಮನೆಗೆ ಹಿಂದಿರುಗಲಿಲ್ಲ.

ಪೂನಾ ಒಪ್ಪಂದದ ಸಂದರ್ಭದಲ್ಲಿ ಗಾಂಧೀ ಆಮರಣಾಂತ ಉಪವಾಸ ಕೈಗೊಂಡು ಅಂಬೇಡ್ಕರರ ಮೇಲೆ ಸಲ್ಲದ ಒತ್ತಡ ತಂದು ಪರಿಶಿಷ್ಟ ಜಾತಿ ಹಾಗೂ ಅಸ್ಪೃಶ್ಯರಿಗೆ ದೊರೆಯಬಹುದಾಗಿದ್ದ ರಾಜಕೀಯ

ಲಾಭಗಳನ್ನು ತಪ್ಪಿಸಿದರೆಂಬ ಭಾವನೆ ಅನೇಕರಲ್ಲಿದೆ. ಆದರೆ ಹಿಂದೂ ಧರ್ಮದ ಅವಿಭಾಜ್ಯ ಕುಪದ್ಧತಿಯಾಗಿದ್ದ ಅಸ್ಪೃಶ್ಯತಾ ಆಚರಣೆಯನ್ನು ನಿವಾರಿಸಲು ಅಂಬೇಡ್ಕರ್ ಎಷ್ಟು ಕಂಕಣಬದ್ಧರಾಗಿದ್ದರೋ ಅಷ್ಟೇ ಕಂಕಣಬದ್ಧರಾಗಿದ್ದರು ಗಾಂಧೀ ಸಹ. ಅಂಬೇಡ್ಕರ್ ತಮ್ಮ ಒಂದು ಭಾಷಣದಲ್ಲಿ ಹಿಂದೂ ಧರ್ಮಕ್ಕಿಂತ ಅದರಲ್ಲಿರುವ ಅಸ್ಪೃಶ್ಯತಾ ಆಚರಣೆಯನ್ನು ತಾವು ವಿರೋಧಿಸುವುದಾಗಿ ಹೇಳಿದ್ದಾರೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಇರುವ ಸಮಾಜದ ನಿರ್ಮಾಣದ ಕಲ್ಪನೆಯನ್ನು ಅಂಬೇಡ್ಕರ್ ಹೊಂದಿದ್ದರು. ಇದಕ್ಕೆ ವಿರೋಧವಾದ ಕಲ್ಪನೆಯನ್ನೇನೂ ಗಾಂಧೀ ಹೊಂದಿರಲಿಲ್ಲ. ಆದ್ದರಿಂದಲೇ ಗಾಂಧೀಯವರ ಆಮರಣ ಉಪವಾಸದ ಕಾಲದಲ್ಲಿ ಅಂಬೇಡ್ಕರ್ ಪೂನಾ ಒಪ್ಪಂದಕ್ಕೆ ಒಪ್ಪಿದ್ದು, ಹಿಂದೂ ಧರ್ಮದ ಹಿತಕ್ಕಾಗಿಯೇ ಹೊರತು ಗಾಂಧಿಯನ್ನು ಉಳಿಸಲು ಅಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಉಪವಾಸದ ಸಂದರ್ಭದಲ್ಲಿ ಗಾಂಧೀಯವರು ಅಂಬೇಡ್ಕರರಿಗೆ ಹೇಳಿದ ಈ ಮಾತು ಅಂಬೇಡ್ಕರರನ್ನು ಯೋಚನೆಗೊಳಪಡಿಸಿರಬೇಕು. "ನನಗೆ ನಿಮ್ಮ ಮೇಲೆ ಯಾವ ಕೋಪವೂ ಇಲ್ಲ. ನೀವು ಅಸಭ್ಯ ಮತ್ತು ಕೋಪದ ಶಬ್ದಗಳನ್ನು ನನ್ನ ಬಗ್ಗೆ ಹೇಳಿದಾಗ ನಾನು ಅವುಗಳಿಗೆ ಯೋಗ್ಯನೆಂದೇ ಅಂದುಕೊಳ್ಳುತ್ತೇನೆ. ನೀವು ನನ್ನ ಮುಖಕ್ಕೆ ಉಗಿದರೂ ಸಹ ನಾನು ಕೋಪಗೊಳ್ಳುವುದಿಲ್ಲ. ನಾನು ಈ ಮಾತನ್ನು ದೇವರನ್ನು ಸಾಕ್ಷಿಯನ್ನಾಗಿಟ್ಟು ಹೇಳುತ್ತಿದ್ದೇನೆ. ನೀವು ಅಸ್ಪೃಶ್ಯತೆಯೆಂಬ ವಿಷವನ್ನು ಬಹಳಷ್ಟು ಕುಡಿದಿದ್ದೀರೆಂದು ನನಗೆ ಗೊತ್ತು, ಆದಾಗ್ಯೂ ನಿಮಗೆ ಅಚ್ಚರಿಯನ್ನುಂಟು ಮಾಡುವ ಒಂದು ನನ್ನ ಹಕ್ಕನ್ನು ನಿಮ್ಮ ಮುಂದೆ ಇರಿಸುತ್ತೇನೆ. ನೀವು ಅಸ್ಪೃಶ್ಯರಾಗಿ ಹುಟ್ಟಿದ್ದೀರಿ ಆದರೆ ನಾನು ದತ್ತು ಸ್ವೀಕಾರದ ಅಸ್ಪೃಶ್ಯನಾಗಿದ್ದೇನೆ ಆದ್ದರಿಂದ ಅಸ್ಪೃಶ್ಯರೆಲ್ಲರ ಹಿತದ ಬಗ್ಗೆ ನನಗೆ ಹೆಚ್ಚು ಕಾಳಜಿ ಇದೆ."

ಈ ಮಾತನ್ನು ಬರೆಯುವಾಗ ಡಾ|| ಅರವಿಂದ ಮಾಲಗತ್ತಿಯವರ ಸಂಪಾದಕತ್ವದ "ಡಾ|| ಅಂಬೇಡ್ಕರ್ ವಿಚಾರಧಾರೆ" ಎಂಬ ಪುಸ್ತಕದಲ್ಲಿ ಬಂದಿರುವ ಈ ಮಾತುಗಳು ಸಹಜವಾಗಿಯೇ ನೆನಪಾಗುತ್ತವೆ. "ಭಾರತದ ಎರಡು ಮಹಾಪುತ್ರರು ಗಾಂಧೀ ಮತ್ತು ಅಂಬೇಡ್ಕರ್. ಅವರು ತಮ್ಮ ಹೋರಾಟಕ್ಕೆ ಹಿಡಿದ ಮಾರ್ಗ ಪರಸ್ಪರ ಭಿನ್ನವಾದವು. ಆದರೆ ಅವರು ಧರಿಸಿದ್ದ ಧ್ಯೇಯ ಮಾತ್ರ ಭವ್ಯವಾದದ್ದು. ಧರಿಸಿಕೊಂಡ ಆ ಧ್ಯೇಯ ಸಾಧನೆಯಲ್ಲಿ ಕೋಪತಾಪಗಳು ಉದ್ಭವಿಸಿದ್ದು ಸಹಜ. ಆದರೆ ಅಳೆದು ಹೇಳಲಸಾಧ್ಯವಾದ ಅವರ ಕಾರ್ಯನಿಷ್ಠೆ, ವಿಚಾರ ಸಮನ್ವಯ ಇವೆಲ್ಲವೂ

ಭಾರತವನ್ನು ಒಂದು ಸಮರ್ಥಶಾಲಿ ರಾಷ್ಟ್ರವನ್ನಾಗಿ ಕಟ್ಟಿ, ಲೋಕದಲ್ಲೇ ಶಾಂತಿ ಸೌಹಾರ್ದಕ್ಕೆ ಹೆಸರಾದ ಏಕಮಾತ್ರ ರಾಷ್ಟ್ರವನ್ನಾಗಿ ಕಟ್ಟುವ ಸಲುವಾಗಿಯೇ ಈ ಎರಡು ಮಹಾವೀರರ ನಿರಂತರ ಹೋರಾಟ ನಡೆದದ್ದು. ಇಂದು ಭಾರತ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿದೆ. ಲೋಕದಲ್ಲಿ ತನ್ನ ಬದುಕಿಗಾಗಿ ಭಾರತ ಮಾರ್ಕ್ಸ್ ಮತ್ತು ಮಾವ್ಹೊತ್ಸೆತುಂಗರು ನಿರ್ಮಿಸಿದ ಹಾದಿಯಲ್ಲಿ ನಡೆಯ ಬೇಕು. ಇಲ್ಲವೇ ಗಾಂಧೀ ಮತ್ತು ಅಂಬೇಡ್ಕರ್ ನಿರ್ಮಿಸಿರುವ ಮಾರ್ಗವೇ ತನಗೆ ಏಕೈಕ ಪರ್ಯಾಯ ಮಾರ್ಗ ಎಂಬುದನ್ನು ತಿಳಿಯ ಬೇಕು.. ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ಲೋಕದಲ್ಲಿ ಯಾರನ್ನೂ ದ್ವೇಷಿಸಲಿಲ್ಲ.

ಪೂನಾ ಒಪ್ಪಂದದ ಮೂಲಕ ಗಾಂಧೀ ಅಸ್ಪೃಶ್ಯರ ರಾಜಕೀಯ ಏಳಿಗೆಯ ದಮನ ಮಾಡಿದರೆಂದು ಅಂಬೇಡ್ಕರ್ ಖಡಾಖಂಡಿತವಾಗಿ ಬಹಿರಂಗವಾಗಿ ತಮ್ಮ ಯಾವ ಭಾಷಣದಲ್ಲೂ, ಬರಹದಲ್ಲೂ ಹೇಳಿದ್ದಾಗಲಿ ಬರೆದಿದ್ದಾಗಲಿ ತಿಳಿದುಬಂದಿಲ್ಲ. ಆದರೂ ಸಹ ಕೆಲ ಬುದ್ಧಿಜೀವಿಗಳು ಪೂನಾ ಒಪ್ಪಂದದಲ್ಲಿ ಅದರಲ್ಲಿರುವ ಅರ್ಥಕಿಂತಲೂ ಹೆಚ್ಚಿನ ಅರ್ಥವನ್ನು ಹುಡುಕಲು ಹೊರಟಿದ್ದು ಆ ಇಬ್ಬರು ನಾಯಕರಿಗೆ ಮಾಡುವ ಅನ್ಯಾಯ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದ್ದು ಅಸ್ಪೃಶ್ಯತಾ ನಿವಾರಣೆಯನ್ನು ಗಾಂಧೀ ಹೃದಯ ಪರಿವರ್ತನೆಯ ಮೂಲಕ ಮಾಡಲು ಪ್ರಯತ್ನಿಸಿದ್ದರೆ ಅನೇಕ ಸಲ ಅಂಬೇಡ್ಕರ್‌ರು ಸಾಮಾಜಿಕ ಪರಿವರ್ತನೆ ಶಾಸನಗಳಿಂದ ಸಾಧ್ಯವಿಲ್ಲವೆಂದು ಹೇಳಿದ್ದುಂಟು.

ಡಾ|| ಅಂಬೇಡ್ಕರ್ ಗಾಂಧಿಯಿಂದ ದೂರ ಇದ್ದರೆಂದು ಕೆಲವೊಂದು ಸಲ ಅನಿಸಿದರೂ ನಿಜವಾಗಿ ಅವರು ಗಾಂಧೀಗೆ ಹತ್ತಿರದವರೇ ಆಗಿದ್ದರು.

* * *

ಸನ್ಮಾನ್ಯರಿಂದ

ನಿಮ್ಮ ಪತ್ರಿಕೆಯೇನೊ ಚನ್ನಾಗಿದೆ ಆದರೆ ಈಗ ಪೀತ ಪತ್ರಿಕಾ ಪ್ರಪಂಚ. ಸಾತ್ವಿಕ, ತಾತ್ವಿಕ ಹಿನ್ನಲೆಯುಳ್ಳ ಪತ್ರಿಕೆಗೆ ಪ್ರಸಾರ ಕ್ಷೇತ್ರವೂ ಸೀಮಿತ

–ಎಂ. ವಾಸುದೇವಾಚಾರ್ಯ
ಸರ್ವೋದಯ ಗ್ರಾಮ

ಭಾರತೀಯ ಪ್ರಜಾಪ್ರಭುತ್ವ ೨೧ನೆಯ ಶತಮಾನದಲ್ಲಿ ಸವಾಲುಗಳು

–ಡಾ|| ಮನೋಹರ ಸಿಂಗ್ ಗಿಲ್

ಈ ವರ್ಷದ ಸರದಾರ್ ಪಟೇಲ್ ಉಪನ್ಯಾಸ ನೀಡಲು ನನಗೆ ದೊರೆತ ಆಮಂತ್ರಣವನ್ನು ನಾನೊಂದು ಸೌಭಾಗ್ಯ–ಗೌರವ ಎಂದು ಭಾವಿಸುವೆ. ಸ್ವಾತಂತ್ರ್ಯ ಬಂದಾಗ ಉತ್ತರಾಂಚಲದ ಬೆಟ್ಟಗಳ ನಡುವಿನ ಮಸ್ಸೂರಿಯಲ್ಲಿ ನಾನಿನ್ನೂ ಶಾಲಾ ಬಾಲಕ. ಅಂದು ಆಗಸ್ಟ್ ೧೫ ಮಳೆಯಿಂದ ತೊಯ್ದಿತ್ತು. ಅದು ನನಗೆ ಇನ್ನೂ ನೆನಪಿದೆ. ಮಧ್ಯಾಹ್ನ ಆ ಗಿರಿನಗರದ ಶಾಲಾ ಮಕ್ಕಳಾದ ನಾವು ಮಾಲ್‌ನಲ್ಲಿ ಮೆರವಣಿಗೆ ಹೋದೆವು. ಹಿರಿಯರು ಸಿಹಿ ಲಾಡು ಹಂಚಿದರು. ಕೆಲವು ವರ್ಷಗಳ ನಂತರ ಮಸ್ಸೂರಿಯ ಮಾಲ್‌ನಲ್ಲಿ ಸದ್ದಿಲ್ಲದೆ ತಮ್ಮ ಕೆಲವು ಸಂಗಡಿಗರ ಜತೆ ಸರ್ದಾರ್ ಪಟೇಲ್ ನಡೆದು ಹೋಗುತ್ತಿರುವುದನ್ನು ಭಾನುವಾರ ದಿನ ಶಾಲೆಯಿಂದ ಹೊರಗೆ ನನ್ನನ್ನು ಕರೆದೊಯ್ದಾಗ ನೋಡಿದೆ. ಅವರು ಅದ್ಭುತ ಶಾಂತಭಾವ ತೋರಿದ್ದರು. ಬಿಸ್ಮಾರ್ಕ್‌ನಂತಹ ಅಜಾನುಬಾಹು. ನುಣುಪು ಮಾಡಿದ ಗ್ರಾನೈಟ್ ಕಲ್ಲಿನಲ್ಲಿ ಕಡಿದಂತಿದ್ದ ಶಕ್ತಿಶಾಲಿ ಮುಖದ ವ್ಯಕ್ತಿತ್ವ. ಮತ್ತೊಂದು ಯುಗದಲ್ಲಾಗಿದ್ದರೆ ರೋಮನ್ ಸೆನೆಟರ್ ಆಗಿದ್ದಿರಬಹುದು. ಅವರು ಬಹಳ ಬೇಗ ತೀರಿಕೊಂಡರು. ಅತಿ ಮಹತ್ವದ ವರ್ಷಗಳಲ್ಲಿ ಸ್ವತಂತ್ರ ಭಾರತ ಶಾಂತಚಿತ್ತದ, ಸುಸ್ಥಿರ ನೋಟದವರೊಬ್ಬರನ್ನು ಕಳೆದುಕೊಂಡಿತು.

ನಂತರದ ವರ್ಷಗಳಲ್ಲಿ ಸ್ವಾತಂತ್ರ್ಯ ಹಾಗೂ ದೇಶ ವಿಭಜನೆ ಕುರಿತಂತೆ ಸಿಕ್ಕಿದ್ದೆಲ್ಲವನ್ನೂ ನಾನು ಓದಿದೆ. ಭಾರತೀಯ ಸಂಸ್ಥಾನಗಳ ವಿಲೀನ ಕುರಿತಂತೆ ವಿ.ಪಿ.ಮೆನನ್ ಅವರ ಪುಸ್ತಕ ನನ್ನ ಮೇಲೆ ಪ್ರಬಲ ಪ್ರಭಾವ ಬೀರಿತು. ೬೦೦ಕ್ಕೂ ಹೆಚ್ಚು ರಾಜರ ಸಂಸ್ಥಾನಗಳನ್ನು ಅತಿ ಕ್ಷಿಪ್ರವಾಗಿ ೧೯೪೭–೪೮ರಲ್ಲಿ ಕೇಂದ್ರದ ಪ್ರಭಾವಿ ನಿಯಂತ್ರಣಕ್ಕೆ ತಂದ ಸರ್ದಾರ್ ಪಟೇಲ್‌ರ ಮಿಂಚಿನ ಸಾಮರ್ಥ್ಯದ ಬಗ್ಗೆ ೫೦ ವರ್ಷಗಳ ಹಿಂದಕ್ಕೆ ಈಗ ನೋಡಿದಾಗ ನಾನು ದಿಗ್ಮೂಢನಾಗುತ್ತೇನೆ. ಫ್ರಾನ್ಸ್ ದೇಶದಷ್ಟು ಗಾತ್ರದ ರಾಜ್ಯಗಳಿಂದ ಹಿಡಿದು ಹನ್ನೆರಡು ಹಳ್ಳಿಗಳ ಅಥವಾ ಹಿಮಾಚಲದ ಗಿರಿಕಂದರಗಳ ಒಂದೇ ಒಂದು ಹಳ್ಳಿಗೆ ರಾಜರನ್ನು ನೇಮಿಸುವ, ನಿಜವಾಗಿಯೂ ಆಶ್ಚರ್ಯದ ವ್ಯವಸ್ಥೆಯನ್ನು ಬ್ರಿಟಿಷರು ೧೮ ಮತ್ತು ೧೯ನೆಯ ಶತಮಾನಗಳಲ್ಲಿ ಮಾಡಿದರು. ಒಂದು ಹಳ್ಳಿಯರಾಜ, ಅವನ ಜಮೀನನ್ನು ಅವನೇ ಉಳುವಂತೆ, ಅವನ ದನಕರುಗಳನ್ನು ಅವನೇ

ಕಾಯುವಂತೆಯೂ ಬ್ರಿಟಿಷರು ಮಾಡಿದರು. ಸ್ವಾತಂತ್ರ್ಯ ಬರುತ್ತಿದ್ದಂತೆ ರದ್ಧತಿ ಸಿದ್ಧಾಂತ ಉಲ್ಲೇಖಿಸಿ ಮೌಂಟ್ ಬ್ಯಾಟನ್ ಕೆಲವು ದೊಡ್ಡ ರಾಜರ ದುರಾಸೆ ಕನಸುಗಳಿಗೆ ಮತ್ತು ದಡ್ಡ ಆಸೆಬುರುಕುತನಗಳಿಗೆ ಹೆಚ್ಚು ಉಮೇದು ಕೊಟ್ಟರು. ಪೂರ್ವ–ಪಶ್ಚಿಮ ಭಾಗಗಳಲ್ಲಿ ವಿಭಜಿತ ದೇಶ ಆಗಲೇ ಲಕ್ಷಾಂತರ ನಿರಾಶ್ರಿತರ ಭೀಕರ ಸಮಸ್ಯೆ ಎದುರಿಸುತ್ತಿತ್ತು. ಮತ್ತೊಂದು ಹೆಚ್ಚುವರಿ ಸವಾಲು ಹೊತ್ತುಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಈ ಸ್ವಾರ್ಥಿ ರಾಜರನ್ನು ರಾಷ್ಟ್ರೀಯ ಮೂಲವಾಹಿನಿಗೆ ತರಲು ಪುಸಲಾಯಿಸುವ, ಹೆದರಿಸಿ–ಬೆದರಿಸುವ, ಆಮಿಷವೊಡ್ಡಿ ಬಲೆಗೆ ಹಾಕಿಕೊಳ್ಳುವ ಚಾತುರ್ಯ, ದಿಟ್ಟ ರೈತ ವಿವೇಕ ಮತ್ತು ದೃಢನಿರ್ಧಾರದ ಏಕೈಕ ವ್ಯಕ್ತಿಯೆಂದರೆ ಆ ಸರ್ಕಾರದಲ್ಲಿದ್ದ ಸರ್ದಾರ್ ಪಟೇಲ್ ಎಂಬುದನ್ನು ಇತಿಹಾಸ ಹಾಗೂ ನನ್ನ ನಂಬಿಕೆಹೆಚ್ಚು ಹೆಚ್ಚು ನನ್ನನ್ನು ಖಾತರಿಪಡಿಸಿವೆ. ಬಿಸ್ಮಾರ್ಕ್‌ಗೆ ಸರಿಸಾಟಿಯಾಗಿ ಸರ್ದಾರ್ ಪಟೇಲರನ್ನು ನಿಲ್ಲಿಸಲು ಇದೊಂದೇ ಸಾಧನೆ ಸಾಕು. ಭಾರತ ದೇಶಕ್ಕಾಗಿ ಅವರ ಸೇವೆ, ತ್ಯಾಗಗಳನ್ನು ಇತಿಹಾಸ ಪರಿಪೂರ್ಣವಾಗಿ ಅಧ್ಯಯನ ಮಾಡಬೇಕಾಗಿದೆ. ಅವರಿಗೆ ಸಲ್ಲಬೇಕಾದುದನ್ನು ಕೊಡಬೇಕಾಗಿದೆ.

ಉಳಿದವರು ಇನ್ನೂ ತಡಕಾಡುತ್ತಿದ್ದಾಗಲೇ, ನಮ್ಮ ರಾಜ್ಯಾಂಗ ಸಭೆ ನಮಗೆ ಸುರಚಿತ ಹಾಗೂ ಸೂಕ್ತ ಸಂವಿಧಾನವನ್ನು ಬಲುಬೇಗ ನೀಡಿತು. ಎಲ್ಲ ಪೌರರಿಗೆ ಸಮರ್ಥನೆ ನೀಡುವುದರ ಮೂಲಕ ಅದು ಶಕ್ತಿಯುತ ಸಂದೇಶವೊಂದನ್ನು ನೀಡಿತು. ಜಾತ್ಯತೀತ ವ್ಯವಸ್ಥೆ, ಮೂಲಭೂತ ಹಕ್ಕುಗಳನ್ನು ಎತ್ತಿಹಿಡಿದು ಪ್ರಬಲ, ಸ್ವತಂತ್ರ ನ್ಯಾಯಾಂಗ ಹಾಗೂ ಒಂದು ಚುನಾವಣಾ ಆಯೋಗ ನೀಡಿತು. ನಾಗರಿಕ ಹಕ್ಕುಗಳು ಹಾಗೂ ಕಾನೂನಿನ ಆಡಳಿತೆ ಸ್ವತಂತ್ರ ಹಾಗೂ ಉದಾರ ವಾತಾವರಣದಲ್ಲಿ ಕಾರ್ಯನಿರ್ವಹಿಸುವ ಎಲ್ಲ ಖಾತರಿ ಒದಗಿಸಿತು. ಅಲ್ಪ ಸಂಖ್ಯಾತರಿಗೆ ಸಕಲ ಸಂರಕ್ಷಣೆ ನೀಡಿತು. ದುರ್ಬಲ ವರ್ಗದವರಿಗೆ ಎಲ್ಲ ಆಶ್ವಾಸನೆ–ಭರವಸೆ ಒದಗಿಸಿತು. ೨೧ ವರ್ಷ ವಯಸ್ಸಿನ ಮೇಲಿನವರಿಗೆಲ್ಲ ವಯಸ್ಕ ಮತದಾನದ ಹಕ್ಕನ್ನು ನೀಡುವ ದಿಟ್ಟ ಕ್ರಮವನ್ನು ನೆಹರು ಕೈಗೊಂಡರು.

ಇದು ಹೇಗೆ ನಡೆದಿದೆ? ಆಹಾರದ ಕೊರತೆ, ಆರ್ಥಿಕ ಸಂಕಟ, ಕೆಲವು ಯುದ್ಧಗಳು, ಆಗಾಗ ಆದರೆ ನಿಯತಕಾಲದಲ್ಲಿ ಸಂಭವಿಸುವ ಕೋಮು ವಿರಸ, ವಿಕೇಂದ್ರೀಕರಣಕ್ಕಾಗಿ ರಾಜ್ಯಗಳ ತಗಾದೆ, ಭಾಷೆ, ಹಣಕಾಸು ಹಂಚಿಕೆ, ಜಲ ಮತ್ತು ಗಡಿ ವಿವಾದಗಳು ಇವೆಲ್ಲವುಗಳನಡುವೆಯೂ ಗಣರಾಜ್ಯದ ೫೬ ಸಂಘರ್ಷಮಯ ವರ್ಷಗಳಲ್ಲಿ ಇದು ಒಟ್ಟಾರೆ ಚೆನ್ನಾಗಿಯೇ ನಡೆದಿದೆ. ಡೆನ್ಮಾರ್ಕಿನ ವಿದೇಶಾಂಗ ಸಚಿವರಿಗೆ ಒಮ್ಮೆ ನಾನು ಹೇಳಿದೆ: “ಸಚಿವ ಮಾನ್ಯರೇ

ನಿಮ್ಮ ತಲಾವಾರು ಆದಾಯ ೨೦,೦೦೦ ಅಥವಾ ಅದಕ್ಕೂ ಹೆಚ್ಚು ಇರುವಾಗ ಪರಿಪೂರ್ಣ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವುದು ಸರಿ. ಆದರೆ ಅದೇ ನಿಮ್ಮ ವರಮಾನ ೩೫೦ ಡಾಲರುಗಳಿದ್ದರೆ, ನೀವು ಪ್ರಜಾಪ್ರಭುತ್ವವನ್ನು ನಡೆಸಿ ನೋಡಿ, ಪ್ರಯತ್ನಿಸಿ" ಎಂದು ನಾನು ಅವರಿಗೆ ಹೇಳಿದೆ. ನಾವು ಈ ಅವಧಿಯಲ್ಲಿ ಸಮರ್ಪಕವಾದ ರೀತಿಯಲ್ಲಿ ನಮ್ಮ ಪ್ರಜಾಪ್ರಭುತ್ವವನ್ನು ಕಾಯ್ದುಕೊಂಡು ಬಂದಿದ್ದೇವೆ ಎಂದು ಹೆಮ್ಮೆಯಿಂದ ಹೇಳಬಹುದು. ಒಂದು ಚುನಾವಣೆಯೂ ನಿಲ್ಲಲಿಲ್ಲ ಅಥವಾ ವಿಳಂಬವಾಗಲಿಲ್ಲ. ಹದಿಮೂರು ಸಂಸದೀಯಹಾಗೂ ಹಲವಾರು ರಾಜ್ಯಗಳ ಚುನಾವಣೆ ಆಗಿವೆ. ಈ ಪ್ರಕ್ರಿಯೆ ನ್ಯಾಯಯುತ ಎಂಬುದಕ್ಕೆ ಸರಳ ಪರಿಕ್ಷೆ ಉಂಟು. ಅದೇ ಅದರ ಫಲಿತಾಂಶಗಳು, ಪ್ರತಿ ೫ ವರ್ಷಗಳಿಗೊಮ್ಮೆ ನಿಯತ ಕಾಲದಲ್ಲಿ ಶೇಕಡಾ ೯೯.೯ರಷ್ಟು ಮತಗಳೊಡನೆ ಅವರ ನೆಚ್ಚಿನ ನಾಯಕ ಆಯ್ಕೆಯಾಗುವ ದೇಶಗಳೂ ಉಂಟು. ಭಾರತದಲ್ಲಾದರೋ ಆರಂಭದ ವರ್ಷಗಳು ಒಮ್ಮೆ ಮುಗಿದ ಮೇಲೆ ಸ್ವಾತಂತ್ರ್ಯ ಹೋರಾಟದ ನಾಯಕರ ಪ್ರಭಾವ ತಗ್ಗಿದ ನಂತರ ಪ್ರಬಲ ಅರ್ಥಪೂರ್ಣ ವಿರೋಧ ಪಕ್ಷಗಳು ಅಸ್ತಿತ್ವಕ್ಕೆ ಬಂದವು. ಅವು ಪರ್ಯಾಯವನ್ನು, ಟೀಕೆಯನ್ನು ಒದಗಿಸಿದವು. ಕಳೆದ ನಾಲ್ಕು ದಶಕಗಳಲ್ಲಿ ಮಹಾನ್ ನಾಯಕರೂ, ಪಕ್ಷಗಳೂ, ನಿಯಮಿತವಾಗಿ ಪದಚ್ಯುತರಾಗುತ್ತಿದ್ದಾರೆ. ಆಸಕ್ತಿಯಿಂದ ಜನ ರಾಜಕೀಯ ಜೀವನ ಅಂಗೀಕರಿಸಿದ್ದಾರೆ. ಅತ್ಯಂತ ವಿವೇಕದಿಂದ ಅವರು ಮತ ಚಲಾಯಿಸುತ್ತಾರೆ. ರಾಜಕೀಯ ಪಕ್ಷಗಳು ಮತ್ತು ಅವುಗಳ ನಾಯಕರಿಗೆ ಮತದಾರರನ್ನು ಕಂಡರೆ ದಿಗಿಲು.

ಇನ್ನು ಆಡಳಿತೆ ಹೇಗೆ? ೧೯೬೭ರ ವರೆಗೆ ಮೊದಲ ೨೦ ವರ್ಷಗಳ ಕಾಲ ಸ್ಥಿರತೆ ಅಷ್ಟೇನೂ ಕಷ್ಟವಾಗಿರಲಿಲ್ಲ. ರಾಷ್ಟ್ರೀಯ ನಾಯಕನೊಬ್ಬನ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟದ ಪ್ರಭಾವಳಿ ಹೊತ್ತುಕೊಂಡ ಏಕಮಾತ್ರ ರಾಜಕೀಯ ಪಕ್ಷವೊಂದು ಕೇಂದ್ರ ಹಾಗೂ ರಾಜ್ಯಗಳಲ್ಲಿ ಆಡಳಿತ ನಡೆಸಿತು. ವಿರೋಧ ಪಕ್ಷ ಸಾಂಕೇತಿಕವಾಗಿತ್ತು. ನಾಗರಿಕ ಸೇವೆಗಳ ಮಾದರಿಯಲ್ಲೇ ಪಕ್ಷದ ಆಂತರಿಕ ಶಿಸ್ತು ಗಟ್ಟಿಮುಟ್ಟಾಗಿತ್ತು. ಅರೆಬರೆ ಸೋವಿಯತ್ ಯೋಜನಾ ಮಾದರಿಯಲ್ಲಿ ಆರ್ಥಿಕ ಅಭಿವೃದ್ಧಿಗೆ ಪ್ರಾಧಾನ್ಯತೆ. ಈ ಅವಧಿಯಲ್ಲಿ ಸರ್ಕಾರದಲ್ಲಿ ಕೆಲಸ ಮಾಡುತ್ತಿದ್ದ ನಮ್ಮಂತಹವರು ತೀವ್ರ ಕೇಂದ್ರೀಕರಣದ ಅಡಿಯಲ್ಲಿ ಬೆಳಗಿದೆವು.

ಅಧಿಕ ಸಂಸದೀಯ ಪ್ರಭಾವಳಿ ಹೊಂದಿರುವ ರಾಜ್ಯಗಳ ಪರವಾಗಿ ಸ್ವಜನ ಪಕ್ಷಪಾತದ ಅನಿವಾರ್ಯ ಸೋಂಕಿನೊಡನೆ ಕೈಗಾರಿಕಾ ಪರವಾನಗಿಗಳನ್ನು ಕೇಂದ್ರ ಸರ್ಕಾರದಿಂದ ಉಡುಗೊರೆಯಾಗಿ

ನೀಡಲಾಗುತ್ತಿತ್ತು. ಪಂಜಾಬಿನವರಾದ ನಮಗೆ ದೆಹಲಿಗೆ ರಸ್ತೆ ಮೂಲಕ ಸುಲಭವಾಗಿ ತಲುಪುದು ಸಾಧ್ಯವಿತ್ತು. ನಿರಂತರವಾಗಿ, ನಿಧಾನವಾಗಿ ಸಾಗುವ ರೈಲುಗಳು ಅಥವಾ ಕಳಪೆ ಮಟ್ಟದ ಡಕೋಟಾ ವಿಮಾನಗಳ ಮೂಲಕ ಪ್ರಯಾಣ ಮಾಡಿ, ಭಾವನೆಹೀನ ದೆಹಲಿ ದೊರೆಗಳ ಬಳಿ ತಮ್ಮ ಭೇಟಿ ಕಾಯ್ದುಕೊಳ್ಳುತ್ತಿದ್ದ ದೂರದ ದಕ್ಷಿಣ ಹಾಗೂ ಪೂರ್ವ ಭಾಗಗಳ ಆಡಳಿತಗಾರರ ಬವಣೆ ಹೇಳತೀರದ್ದಾಗಿತ್ತು. ಇಷ್ಟಾದರೂ ಒಂದಿಷ್ಟು ಉಪಯುಕ್ತ ಸಾಧನೆ ಸಾಧ್ಯವಾಯಿತು. ಹೊಸದಾಗಿ ಸ್ವತಂತ್ರಗೊಂಡ ದೇಶಗಳ ಪೈಕಿ ಭಾರತಕ್ಕೆ ಮಾತ್ರ ಒಂದು ರಾಷ್ಟ್ರೀಯ ವೈಜ್ಞಾನಿಕ ಹಾಗೂ ಕೈಗಾರಿಕಾ ಬುನಾದಿ ನಿರ್ಮಿಸಿಕೊಳ್ಳಲು ಸಾಧ್ಯವಾಯಿತು. ಈಗ ನಾವು ಮಾರಾಟ ಮಾಡುತ್ತಿರುವ ನವರತ್ನಗಳು ಆಗ ಒಲುಮೆಯಿಂದ ರೂಪುಗೊಂಡದ್ದು. ನಾನು ಆಫ್ರಿಕಾಗೆ ಹೋದಾಗ ನನಗೆ ಗೊತ್ತಾಯಿತು ನಮ್ಮನ್ನು ಕಂಡ ಅವರೆಷ್ಟು ಕರುಬುವರು ಎಂಬುದು. ನಮ್ಮ ಸ್ವಾವಲಂಬನೆಯ ಬಗ್ಗೆ ಅವರಿಗೆ ಅಸೂಯೆ. ಇದನ್ನು ನಾವು ಎಂದಿಗೂ ಮರೆಯುವಂತಿಲ್ಲ. ಡಾಕ್ಟರ್ ರಾಜ್ ಅವರ ದೃಷ್ಟಿಯ ಒಂದೇ ಸಮನೆ ಇರುವ ಬೆಳವಣಿಗೆಯ ದರ ೫೦ರ ದಶಕದ ಪಿಎಲ್ ೪೮೦ ಅಮೆರಿಕಾದ ಗೋಧಿಯ ಕಾಲವನ್ನು ನಾವು ಮರೆಯುವಂತೆ ಮಾಡಿದೆ. ೬೦ರ ಕೊನೆಯ ಭಾಗದ ಪಂಜಾಬಿನ ಹಸಿರು ಕ್ರಾಂತಿಯ ಸ್ವಾವಲಂಬನೆ ಇದನ್ನು ಸಾಧ್ಯಮಾಡಿತು. ಆತಂಕದ ದಿನಗಳು ಎದ್ದು ಕಾಣಲಾರಂಭಿಸಿದವು. ಇದೇ ಸಂದರ್ಭದಲ್ಲಿ ವಿರೋಧ ಪಕ್ಷಗಳ ಮೊದಲ ಸರ್ಕಾರಗಳು ಹುಟ್ಟಿಕೊಂಡವು. ಇವಕ್ಕೂ ಮುಂಚೆ ಇಂತಹ ಕೆಲವು ಸರ್ಕಾರಗಳು ಅಸ್ತಿತ್ವಕ್ಕೆ ಬಂದಿದ್ದವು. ಆದರೆ ಪ್ರಬಲ ಕೇಂದ್ರದ ಮುಂದೆ ಅವುಗಳ ಅಸ್ತಿತ್ವ ಕಠಿಣವಾಗಿತ್ತು. ಆಂತರಿಕ ಹಾಗೂ ಬಾಹ್ಯತ್ವೇಷಗಳಿಂದ ಮೊದಲ ಸಮ್ಮಿಶ್ರ ಸರ್ಕಾರಗಳು ಹುಟ್ಟಿದವು. ರಾಜ್ಯಪಾಲರ ಹುದ್ದೆಗಳು ಪರೀಕ್ಷೆಗೊಳಪಟ್ಟವು. ರಾಜ್ಯಗಳ ಅತ್ಯುತ್ತಮ ಪ್ರಜಾಸತ್ತಾತ್ಮಕ ಹಿತಗಳಿಗನುಗುಣವಾಗಿ ಸ್ವತಂತ್ರ ಕಾರ್ಯನಿರ್ವಹಣೆ ಮಾಡುವುದು ಸಂವಿಧಾನಾತ್ಮಕವಾಗಿ ಅಗತ್ಯವಿದ್ದರೂ ಕೆಲವರು ಮಾರ್ಗದರ್ಶನಕ್ಕೆ ದೆಹಲಿಯ ಕಡೆ ಮುಖ ಮಾಡಲಾರಂಭಿಸಿದರು.

ಆರಂಭದ ದಶಕಗಳಲ್ಲಿ ಕೇಂದ್ರ ಹಾಗೂ ರಾಜ್ಯಗಳ ನಡುವೆ ಉತ್ತರ ದಕ್ಷಿಣ ಹಾಗೂ ಪೂರ್ವಗಳ ನಡುವೆ ಸಂಘರ್ಷ ವಿರಸ ಅನೇಕ ಬಾರಿ ಹುಟ್ಟಿಕೊಂಡಿತ್ತು. ಒಂದು ಉಪಖಂಡದಷ್ಟಿರುವ ದೇಶ, ಅನೇಕಾನೇಕ ಧರ್ಮಶಃ ಜನಂಗೀಯ ಗುಂಪು, ಭಾಷೆ ಹಾಗೂ ಜಾತಿಗಳು, ಅಭಿವೃದ್ಧಿ ಆಶೋತ್ತರ ಮಟ್ಟದಲ್ಲಿ ಅಂತರ- ಈ ಸಂಘರ್ಷ ಸ್ವಾಭಾವಿಕವೇ. ಹೆಚ್ಚು ಕಡಿಮೆ ಕೇಂದ್ರದ ಉದಾರ ಭಾವನೆ, ಕೇಳಿಸಿ ಕೊಳ್ಳುವ, ಚರ್ಚಿಸುವ, ವಾದ ಮಾಡುವ ಹಾಗೂ ರಾಜೀ ಮಾಡಿಕೊಳ್ಳುವ ಧೋರಣೆಗಳುದಾಗಿ ಅನೇಕ ಕುಂದುಕೊರತಗಳನ್ನು ನೀಗಲು

ಸಾಧ್ಯವಾಯಿತು. ತತ್ಕಾಲಕ್ಕೆ ಸಮಸ್ಯೆಗೆ ಉಪಶಮನವಂತೂ ದೊರಕಿತು. ಪ್ರಾದೇಶಿಕ ಹಾಗೂ ಸ್ಥಳೀಯ ಕುಂದುಕೊರತೆಗಳನ್ನು ನೀಗಲು ಅನೇಕ ಕಾಯಿದೆ ಹಾಗೂ ಸಂವೈಧಾನಿಕ ವ್ಯವಸ್ಥೆಗಳನ್ನು ರೂಪಿಸಲಾಯಿತು. ವಿವೇಕಯುತ ಆಡಳಿತಕ್ಕಾಗಿ ಆಫ್ರಿಕಾ, ಏಷ್ಯಾ ದೇಶಗಳಿಗೆ ಹೋಲಿಸಿದರೆ ಭಾರತ ತನ್ನನ್ನು ತಾನೇ ಬೆನ್ನುತಟ್ಟಿಕೊಳ್ಳಬಹುದಾಗಿದೆ. ಶಿಸ್ತು ಹಾಗೂ ವಸ್ತುನಿಷ್ಠ ಕಾರ್ಯ ನಿರ್ವಹಣೆಗಳಂತಹ ಹಳೆಯ ಮೌಲ್ಯಗಳ ಚೌಕಟ್ಟಿನೊಳಗೆ ನಾಗರಿಕ ಹಾಗೂ ಪೋಲೀಸ್ ಸೇವೆಗಳು ಕಾರ್ಯನಿರ್ವಹಿಸುತ್ತಾ ಬಂದಿವೆ. ಹೆಚ್ಚೂ ಕಡಿಮೆ ರಾಜಕೀಯಾಡಳಿತೆಯ ಜತೆ ಇಟ್ಟುಕೊಳ್ಳಬೇಕಾದಷ್ಟು ದೂರವನ್ನು ಅವು ಕಾಯ್ದುಕೊಂಡು ಬಂದಿವೆ. ನ್ಯಾಯಾಂಗ, ಕಾರ್ಯಾಂಗ ಹಾಗೂ ರಾಜಕೀಯ ಪ್ರಕ್ರಿಯೆಯಿಂದ ತನ್ನ ಪ್ರತ್ಯೇಕತೆ ಮತ್ತು ದೂರವನ್ನು ಕಾಪಾಡಿಕೊಂಡು ಬಂದು ಅಸೂಯೆಪಡುವಷ್ಟು ಮಟ್ಟದ ಘನತೆ, ಗಾಂಭೀರ್ಯ ಬೆಳೆಸಿಕೊಂಡಿವೆ. ರಾಜಕೀಯ ಆಡಳಿತಗಾರರಿಂದ ಸೇನಾಪಡೆಗಳಂತೂ ಸಾಕಷ್ಟು ದೂರವೇ ಉಳಿದಿವೆ.

೨೦ನೇ ಶತಮಾನದ ಕೊನೆಯ ಎರಡು ದಶಕಗಳಿಗೆ ನಾವು ಕಾಲಿಟ್ಟಂತೆ ಬಿಗುವು ಅತಿಯಾಯಿತು ಮತ್ತು ಸಮಸ್ಯೆಗಳು ಹೆಚ್ಚಾದವು. ಸ್ವಾತಂತ್ರ್ಯ ಬಂದಾಗ ದೇಶದ ಜನಸಂಖ್ಯೆ ಸುಮಾರು ೩೦ ಕೋಟಿ. ದುರ್ದೈವದಿಂದ ನಾವೀಗ ೧೦೦ಕೋಟಿ. ದೇಶದ ಉತ್ತರ ಭಾಗದ ಬಹಳಷ್ಟು ಪ್ರದೇಶಗಳಲ್ಲಂತೂ ಇದು ಕ್ಷಿಪ್ರವಾಗಿ ಬೆಳೆಯುತ್ತಲೇ ಇದೆ. ಈ ಮೂರು ಪಟ್ಟು ಹೆಚ್ಚಳ ಎಲ್ಲ ಕಡೆಯೂ ಒತ್ತಡ ಹೇರಿದ್ದು ಸ್ವಾಭಾವಿಕ. ನೆಲ, ಜಲ, ಕಾಡು ವನ್ಯಪ್ರಾಣಿ ಎಲ್ಲಕ್ಕೂ ಸಂಚಕಾರ. ಪವಿತ್ರ ನದಿಗಳು ಕೊಳಚೆ ಗುಂಡಿಗಳಾಗಿವೆ. ರಾಜಕಾರಣ ಆಕ್ರಾಮಕವಾಗಿದೆ. ಧರ್ಮ, ಜಾತಿ, ಜನಾಂಗ, ಪ್ರದೇಶ ಅಥವಾ ಭಾಷೆ ಹೀಗೆ ವರ್ಗೀಕೃತ ಹಿತಾಸಕ್ತಿಗಳು. ಭೂಮಿಗಾಗಿ ಮತ್ತು ಬದುಕಿಗಾಗಿ ಹತಾಶ ಅಪೇಕ್ಷೆಯಿಂದ ವಿಭಿನ್ನ ಗುಂಪುಗಳು ತಮ್ಮ ಪಾಲಿಗೆ ತಹತಹಿಸುತ್ತಿವೆ. ಸಂವಾದವಿಲ್ಲ, ಆದರೆ ಅತಿಯಾದ ಅಬ್ಬರ. ಈ ದಶಕಗಳಲ್ಲಿ ಸಾರ್ವಜನಿಕ ಸೇವೆಗಳು ಸಾಕಷ್ಟು ಹೊಡೆತ ತಿಂದಿವೆ. ದುರಾಸೆಯ ಜನರನ್ನು ತೃಪ್ತಿಪಡಿಸಲಾಗುತ್ತಿದೆ. ಕೆಲವು ಸಾರ್ವಜನಿಕ ಹಿತಕಾಯುವ ದಿಟ್ಟ ಜನರನ್ನು ವಿಧೇಯರಾಗಿರುವಂತೆ ಬಗ್ಗು ಬಡಿಯಲಾಗುತ್ತಿದೆ. ಇಲ್ಲವೇ ಅವರನ್ನು ಉದಾಸೀನ ಮಾಡಲಾಗುತ್ತಿದೆ. ನೇಮಕಾತಿಯೂ ವಿಚಿತ್ರ. ಮೂವತ್ತು ವರ್ಷದಾಟಿ ಸಂಸಾರದ ಹೊರೆ ಹೊತ್ತ ವಯಸ್ಕರು ಅತ್ಯುನ್ನತ ಮಟ್ಟದ ನಾಗರಿಕ ಸೇವೆಗಳನ್ನು ಪ್ರವೇಶಿಸಲು ವಯೋಮಿತಿ ರಿಯಾಯಿತಿ ಅವಕಾಶ ಮಾಡಿಕೊಟ್ಟಿದೆ. ಅಷ್ಟು ವಯಸ್ಸಾದ ಮೇಲೆ ಅವರನ್ನು ತರಬೇತಿಗೊಳಿಸಲು ಸಾಧ್ಯ ಎಂಬುದು

ಹಾಸ್ಯಾಸ್ಪದ. ಹಳೆಯ ಬ್ರಿಟಿಷ್ ಮಾದರಿಯಲ್ಲಿ ವಿಶ್ವವಿದ್ಯಾಲಯ ಶಿಕ್ಷಣದ ತಕ್ಷಣದಲ್ಲೇ ೨೧ -೨೪ ವಯಸ್ಸಿನೊಳಗೆ ನಮ್ಮನ್ನು ಆಯ್ಕೆ ಮಾಡಿಕೊಳ್ಳಲಾಯಿತು. ನಾವು ಮೂವತ್ತು ವರ್ಷದವರಾಗುವ ವೇಳೆಗೆ ದೊಡ್ಡ ಜಿಲ್ಲೆಗಳ ಜಿಲ್ಲಾಧಿಕಾರಿಗಳಾಗಿದ್ದೆವು.

ಸಂವೈಧಾನಿಕ ಹೊರ ಹೊದಿಕೆ ಇಗಲೂ ಹಾಗೇ ಇದೆ. ಆದರೆ ಹೂರಣ ಮಾಯವಾಗಿದೆ. ಇದಕ್ಕೆ ಒಂದು ಉದಾಹರಣೆ-ನಾನು ಪಂಜಾಬ್ ಸೇವೆಯನ್ನು ಸೇರಿದಾಗ ಸಂಸತ್ತಿನ ಮಾದರಿಯಲ್ಲಿ ರಾಜ್ಯ ವಿಧಾನಸಭೆ ವರ್ಷದ ಏಳು ತಿಂಗಳ ಕಾಲ ನಿಯತವಾಗಿ ಅಧಿವೇಶನ ನಡೆಸುತ್ತಿತ್ತು. ದೆಹಲಿಯಂತೆ ಚಂಡೀಗಢದಲ್ಲೂ ಬಜೆಟ್ ಅಧಿವೇಶನ ಸುದೀರ್ಘವಾಗಿರುತ್ತಿತ್ತು. ಪ್ರತಿಯೊಂದು ಸಚಿವ ಖಾತೆಯ ಬಗ್ಗೆಯೂ ವಿವರವಾಗಿ ಪರಿಶೀಲಿಸಲು ಬಜೆಟ್ ನಡೆಯುತ್ತಿತ್ತು. ಸಂಸದೀಯ ಸಮಿತಿಗಳು ವಿಶೇಷವಾಗಿ ಅಂದಾಜು ಹಾಗೂ ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ಪ್ರಭಾವಶಾಲಿಯಾಗಿ ಕೆಲವೊಮ್ಮೆ ಆಕ್ರಾಮಕವಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಕಾರ್ಯದರ್ಶಿಗಳೂ ಹಾಗೂ ಇಲಾಖಾ ಮುಖ್ಯಸ್ಥರು ಸುದೀರ್ಘ ಪರೀಕ್ಷೆಗೆ ಒಳಪಡುತ್ತಿದ್ದರು. ಸಾರ್ವಜನಿಕ ಲೆಕ್ಕಪತ್ರ ಸಮಿತಿ ಮುಂದೆ ನಾವು ಹಾಜರಾಗಬೇಕಾದರೆ ನಾವು ಭಯದಿಂದ ಬೆವೆತುಹೋಗುತ್ತಿದ್ದೆವು. ಆಕಾಲ ಹೋಯಿತು. ರಾಜ್ಯ ವಿಧಾನಸಭೆಗಳು ಅತಿಕಡಿಮೆ ಸಮಯ ಅಧಿವೇಶನ ಸೇರುತ್ತವೆ. ದೇಶದ ಪೂರ್ವೋತ್ತರ ರಾಜ್ಯ ಒಂದರ ಅತಿ ಸುದೀರ್ಘ ಬಜೆಟ್ ಅಧಿವೇಶನ ಮೂರೂವರೆ ದಿನಗಳು; ಅದರಲ್ಲಿ ಮೊದಲ ದಿನ ಅಗಲಿದವರಿಗೆ ಸಂತಾಪ ಸೂಚಿಸುವುದರಲ್ಲೇ ಕಳೆದುಹೋಯಿತು ಎಂಬ ಸುದ್ದಿ ಓದಿ ನನಗೆ ಸೋಜಿಗವಾಯಿತು. ೧೦-೧೫ ವರ್ಷಗಳಲ್ಲಿ ಉತ್ತರ ಭಾರತದ ಹಲವೆಡೆ ಅತ್ಯಲ್ಪ ಸಮಯದ ವಿಧಾನಸಭೆ ಅಧಿವೇಶನ, ಬಜೆಟ್ ಅಂಗೀಕಾರ ಹಾಗೂ ಮಹತ್ವದ ವಿಧಾನ ಕಲಾಪ ನಡೆದುಹೋಗಿರುವುದನ್ನು ನಾವು ನೋಡಿದ್ದಾಗಿದೆ. ನಿಜಾಂಶವೆಂದರೆ, ರಾಜ್ಯ ವಿಧಾನಸಭೆ ಉದ್ದೇಶದ ತಿರುಳೇ ಈಗ ಮಾರ್ಪಾಡಾಗಿ ಹೋಗಿದೆ. ಸರ್ಕಾರವನ್ನು ಪದಚ್ಯುತ ಗೊಳಿಸಲು, ವಿರೋಧ ಪಕ್ಷಕ್ಕೆ ಒಂದು ಅವಕಾಶ ನೀಡಲು, ಅದನ್ನು ಕೈಬಿಡುವುದೂ ಉಂಟು. ಇಲ್ಲವೇ ಅದಕ್ಕೆ ಅಡಚಣೆಯೂ ಬರಬಹುದು. ಪ್ರತಿ ಬುಧವಾರ, ಬ್ರಿಟನ್ನಿನ ಪ್ರಧಾನಿ ಟೋನಿಬ್ಲೇರ್ ಅವರನ್ನು ಮೊದಲು ವಿರೋಧ ಪಕ್ಷಗಳು, ತರುವಾಯ ಅವರ ಪಕ್ಷದ ಸದಸ್ಯರೇ ಅತೀ ಬಿರುಸಾಗಿ ಕಟಕಟೆಯಲ್ಲಿ ನಿಲ್ಲಿಸುವುದನ್ನು ನೋಡಿದಾಗ, ನಮ್ಮ ಜನರ ಬಗ್ಗೆ ನನಗೆ ವ್ಯಥೆಯುಂಟಾಗುತ್ತದೆ. ಸ್ಪೀಕರ್ ಟೋನಿಬ್ಲೇರ್ಗೆ ರಕ್ಷಣೆ ನೀಡುವುದಿಲ್ಲ. ಅಂತಹ ಪ್ರಸಂಗವನ್ನು ಸಭಾಧ್ಯಕ್ಷರಿಗೆ ತಟಾಯಿಸುವುದೂ ದುಸ್ಸಾಹಸವಾದೀತು. ಟೆಲಿವಿಶನ್‌ನಲ್ಲಿ ನೋಡಲು ಅಂತಹ ಪ್ರಸಂಗಕ್ಕೆ ಇಡೀ ದೇಶವೆ ಎಂದುರು ನೋಡುತ್ತಿರುತ್ತದೆ ಅದು ಇರಾಕ್ ಯುದ್ಧವಾಗಲಿ, ದೇಶದ

ಅರ್ಥ ವ್ಯವಸ್ಥೆಯಾಗಲಿ ಅಥವಾ ಉದ್ಯೋಗಾವಕಾಶ ಪ್ರಶ್ನೆಯಾಗಲಿ ಅವರೇ ತಮ್ಮ ಇಡೀ ಸರ್ಕಾರದ ಪರವಾಗಿ ಉತ್ತರ ನೀಡಬೇಕು.ಅವರು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಶತಮಾನದಲ್ಲಿ ಇದೇ ಮೊದಲಬಾರಿಗೆ ತಮ್ಮ ಇಡೀ ಸರ್ಕಾರದ ಕಾರ್ಯನಿರ್ವಹಣೆ ಮತ್ತು ಸಾಧನೆಗಳ ಬಗ್ಗೆ ವಿವರಣೆ ನೀಡಲು, ಎಲ್ಲ ಸಂಸದೀಯ ಸಮಿತಿಗಳ ಅಧ್ಯಕ್ಷರನ್ನೊಳಗೊಂಡ ಸಮಿತಿಯ ಮುಂದೆ ಹಾಜರಾದರು. ಇಂದು ಭಾರತದಲ್ಲಾದರೋ ಇಂದಿಗೂ ಸಂಸತ್ತು ಸಾಕಷ್ಟು ದಿನಗಳ ಕಾಲ ಸಭೆ ಸೇರುತ್ತದೆಯಾದರೂ ಅನೇಕ ಕಾರಣಗಳಿಂದಾಗಿ ಪರಿಣಾಮಕಾರಿ ಚರ್ಚೆ, ವಾಗ್ವಾದ, ಟೀಕಾಪೂರ್ಣ ಪರೀಕ್ಷೆ ಹಾಗೂ ಸರ್ಕಾರಗಳಿಂದ ಉತ್ತರ ಮುತ್ತರ ಮುರುಟಿ ಹೋಗಿದೆ. ನೆಹರೂ ನಂತರ ಸಂಸತ್ತಿನಲ್ಲಿ ಪ್ರಧಾನಮಂತ್ರಿಗಳು ಕಾಣಿಸಿಕೊಂಡದ್ದು ಕಡಿಮೆಯೇ.

ಚುನಾವಣಾ ಲಾಭಕ್ಕಾಗಿ ಹಲವಾರು ಧಾರ್ಮಿಕ ಮತ್ತು ಸಾಮಾಜಿಕ ಆಂದೋಳನಗಳಿಂದ ಅಕ್ರಮವಾಗಿ ಸ್ಫೂರ್ತಿ ಪಡೆದ ರಾಜಕೀಯ ಪ್ರಕ್ಷುಬ್ಧ ಸ್ಥಿತಿಗಳನ್ನು ೨೦ನೇ ಶತಮಾನದ ಕೊನೆಯ ದಶಕದಲ್ಲಿ ನಾವು ನೋಡಿದೆವು, ರಾಷ್ಟ್ರೀಯ ಹಾಗೂ ರಾಜ್ಯಗಳ ಮಟ್ಟದಲ್ಲಿ ಪದೇ ಪದೇ ಚುನಾವಣೆಗಳನ್ನು ನೋಡಿದೆವು. ಪಕ್ಷಾಂತರ ನಿಷೇಧ ಕಾಯಿದೆ ಇದ್ದರೂ ಈ ಕಾಯಿದೆಯನ್ನು ತೀರಾ ಉದಾಸೀನವಾಗಿ ಜಾರಿಗೆ ಕೊಡಲಾಯಿತು; ಕೆಲವು ವೇಳೆಯಂತೂ ಆ ಬಗ್ಗೆತೀರ್ಮಾನಸಭೆ ಅವಧಿ ಮುಗಿದು ಹೋದದ್ದೂ ಉಂಟು. ಸೈದ್ಧಾಂತಿಕ ಏಕೋಭಾವದ ಕೊರತೆಯಿಂದ ಅಸ್ಥಿರ ಸಮ್ಮಿಶ್ರ ಸರ್ಕಾರಗಳಾಗಿ ಹೋದವು. ಇಂತಹ ಸ್ಥಿತಿಯಲ್ಲಿ, ಅತ್ಯುನ್ನತ ರಾಷ್ಟ್ರೀಯ ಸಂಸ್ಥೆಗಳು ಒತ್ತಡಕ್ಕೊಳಗಾದವು. ಭಾರತದ ಚುನಾವಣಾ ಆಯೋಗ ಹೇಗೋ ಈ ಕಂದರ ಮುಚ್ಚಲು ಧುಮುಕಿತು. ತನ್ನ ಸಂವೈಧಾನಿಕ ಸಾಮರ್ಥ್ಯದ ಸಂಪೂರ್ಣ ಸುಪ್ತ ಅವಕಾಶವನ್ನು ವಿಶ್ಲೇಷಿಸಿತು. ದಿಟ್ಟತನ ಹಾಗೂ ಧೈರ್ಯದ ಆಕ್ರಾಮಕ ಪ್ರದರ್ಶನ ನೀಡಿ ಅತಿಹೀನ ಚುನಾವಣಾ ಆಕ್ರಮಗಳನ್ನು ಹಿಮ್ಮೆಟ್ಟಿಸಲು ಮುಂದಾಯಿತು. ಭಾರತೀಯ ರಾಜ್ಯ ವ್ಯವಸ್ಥೆಯಲ್ಲಿ ಕೇಂದ್ರ ಸ್ಥಾನಕ್ಕೆ ಬರುವಲ್ಲಿ ಅದು ಯಶಸ್ವಿಯಾಯಿತು. ಕಳೆದ ದಶಕದುದ್ದಕ್ಕೂ ಪ್ರಜಾಸತ್ತಾತ್ಮಕ ಚನಾವಣಾ ಪ್ರಕ್ರಿಯೆ ಸುಧಾರಿಸುವ ಹೋರಾಟ ಮುಂದುವರೆಯಿತು. ವ್ಯವಸ್ಥೆಗಳ ಗಮನಾರ್ಹ ಸುಧಾರಣೆಗೆ ಪ್ರಯತ್ನಿಸಲಾಯಿತು. ಮನುಷ್ಯರುಬಂದು ಹೋಗುತ್ತಾರೆ; ಆದರೆ, ವ್ಯವಸ್ಥೆಗಳು ನಿರಂತರ ಸಾಗಿರುತ್ತವೆ.

ಒಂದು ಉದಾಹರಣೆ ಇದಕ್ಕೆ ಸಾಕು. ಮತಪತ್ರಗಳ ಶ್ರಮದಾಯಕ, ಸವಿಸ್ತಾರ ಎಣಿಕೆ ಕುರಿತಂತೆ ಎಲ್ಲ ರಾಜಕೀಯ ಪಕ್ಷಗಳು ದೂರುತ್ತಿದ್ದವು ಈ ಪ್ರಕ್ರಿಯೆಯಲ್ಲಿ ನಿರತ ಸಕಾರಿ ಸಿಬ್ಬಂದಿ ಅಧಿಕಾರದಲ್ಲಿರುವ ಸರ್ಕಾರದ ಪ್ರಭಾವಕ್ಕೆ ಒಳಗಾಗಿ

ಅಕ್ರಮ ಎಸಗುತ್ತವೆ ಎಂಬುದೇ ಆ ದೂರು. ಮತಪತ್ರಗಳ ಬಂಡಲುಗಳನ್ನೇ ಮತಪೆಟ್ಟಿಗೆಯೊಳಗೆ ತುಂಬಲಾಗುತ್ತದೆ. ಇಲ್ಲವೆ ತೆಗೆದುಹಾಕಲಾಗುತ್ತದೆ ಮತ್ತುಉದ್ದೇಶಪೂರ್ವಕವಾಗಿ ತಪ್ಪು ಎಣಿಕೆ ಸಹ ಮಾಡಲಾಗುತ್ತದೆ ಎಂಬುದು ಪಕ್ಷಗಳ ದೂರಾಗಿತ್ತು. ೧೯೯೮ರಲ್ಲಿ ಸುಲಭ, ಸದೃಢ ಹಾಗೂ ಬಳಸಲು ಅನೂಕೂಲವಾದ ಎಲೆಕ್ಟ್ರಾನಿಕ್ ಮತಯಂತ್ರಗಳನ್ನು ಅಳವಡಿಸಿದ ಮೇಲೆ ಈ ಎಲ್ಲ ದೂರುಗಳೂ ನಿವಾರಣೆಯಾದವು. ಈ ಯಂತ್ರ ಒಟ್ಟು ಮತಗಳನ್ನು ಎಣಿಸುತ್ತದೆ. ಅದರಲ್ಲಿ ಅಭ್ಯರ್ಥಿಗಳಿಗೆ ದೊರೆತ ಮತಗಳನ್ನು ದಾಖಲು ಮಾಡುತ್ತದೆ. ಎಣಿಕೆಯ ದಿನ ಎಲ್ಲ ಚುನಾವಣಾ ಯಂತ್ರಗಳೆಲ್ಲ ಗುಣಾಕಾರ, ಭಾಗಾಕಾರ ಮಾಡಿದರೆ ಸಾಕು. ಯಂತ್ರಗಳ ಮೊಹರು ಒಡೆದ ಮೇಲೆ ಈ ಪ್ರಕ್ರಿಯೆ ಆರಭ. ಕೆಲವೇ ಗಂಟೆಗಳಲ್ಲಿ ಫಲಿತಾಂಶ. ಎಲ್ಲೂ ಈ ತನಕ ಯಾವ ರಾಜಕೀಯ ಪಕ್ಷವೂ ಇದಕ್ಕೆ ಚಕಾರವೆತ್ತಿಲ್ಲ. ಚುನಾವಣಾ ಆಯೋಗ ಕೆಲವು ಸುಧಾರಣೆಗಳನ್ನು ಮಾಡಬಹುದು. ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬಹುದು. ಆದರೆ ಸಮಾಜ ಹಾಗೂ ರಾಜಕೀಯ ಪಕ್ಷಗಳ ಸಹಕಾರವನ್ನೇ ಎಲ್ಲವೂ ಅವಲಂಬಿಸಿವೆ. ಅಧಿಕಾರ ಉಳಿಸಿಕೊಳ್ಳಲು ಚುನಾವಣೆ ಸಮಯದಲ್ಲಿ ಅಧಿಕಾರ ದುರುಪಯೋಗ ಆಡಳಿತದಲ್ಲಿರುವ ಪಕ್ಷದ ಪ್ರಯತ್ನ ಪ್ರವೃತ್ತಿ ಮಾನವಸಹಜವಾದದ್ದು. ಇದನ್ನು ನಿವಾರಿಸಲು ಆಯೋಗ ಪರಿಶ್ರಮ ಪಡುತ್ತದೆ. ಆದರೆ ಇದರ ಪೂರ್ಣ ನಿವಾರಣೆಗೆ ಮೂಲಭೂತ ಸಂವೈಧಾನಿಕ ಬದಲಾವಣೆಗಳು ಅಗತ್ಯ. ಚುನಾವಣೆ ಸಮಯದಲ್ಲಿ ಅಧಿಕಾರದಲ್ಲಿ ರಾಜಕೀಯ ಪಕ್ಷವಿರುವ ಹಾಗೂ ಅಭ್ಯರ್ಥಿಯೊಬ್ಬ ಗೆದ್ದು ಅಧಿಕಾರಕ್ಕೆ ಹಿಂತಿರುಗುವ ಬ್ರಿಟಿಷ್ ಪದ್ಧತಿಯನ್ನು ನಾವು ಬಿಡಬೇಕಾಗಿದೆ. ಮತಗಟ್ಟೆ ಹಿಡಿದುಕೊಳ್ಳುವುದು, ಹಿಂಸೆ ಹಾಗೂ ಚುನಾವಣಾ ಸಿಬ್ಬಂದಿಯ ದುರುಪಯೋಗಗಳಂತಹ ಬಹುತೇಕ ಚುನಾವಣಾ ಅಕ್ರಮಗಳು, ಆಡಳಿತ ಪಕ್ಷದಿಂದ ಮಾತ್ರ ಆಗಲು ಸಾಧ್ಯ. ಚುನಾವಣೆಗಳನ್ನು ಪ್ರಕಟಿಸಿದ ತಕ್ಷಣ ರಾಜ್ಯ ಮಂತ್ರಿಮಂಡಲ ರಾಜೀನಾಮೆ ನೀಡಿ ಮಾಯವಾಗಬೇಕು ಎಂದು ನಾನು ಹೇಳುತ್ತಲೇ ಬಂದಿದ್ದೇನೆ. ಹೀಗಾದಾಗ ತಾನೇ ತಾನಾಗಿ ಎರಡು ತಿಂಗಳ ಕಾಲ ರಾಜ್ಯಪಾಲರ ಆಡಳಿತ ಜಾರಿಗೆ ಬರುತ್ತದೆ. ಸಂಪೂರ್ಣ ತಾಟಸ್ಥ್ಯದಿಂದ ಪೊಲಿಸ್ ಹಾಗೂ ನಾಗರಿಕ ಸೇವೆಗಳು ಸಂವಿಧಾನಕ್ಕೆ ಅನುಗುಣವಾಗಿ ತಮ್ಮ ಕರ್ತವ್ಯ ನಿರ್ವಹಿಸಲು ಇದರಿಂದ ಅವಕಾಶ ಸಿಗುತ್ತದೆ. ಯಾವ ಪಕ್ಷವೂ ಅವರ ಮೇಲೆ ಒತ್ತಡ ತರುವುದಾಗಲೀ,

ಅಥವಾ ಪ್ರಭಾವ ಬೀರುವುದಾಗಲೀ ಸಾಧ್ಯವಾಗುವುದಿಲ್ಲ. ಸರ್ಕಾರ ವಿರೋಧ ಪಕ್ಷಗಳ ಜತೆ ಸಮಾಲೋಚನೆ ನಡೆಸಿ ಎಲ್ಲ ಪಕ್ಷಗಳೂ ಮಾನ್ಯ ಮಾಡುವ ನಿಷ್ಪಕ್ಷಪಾತ ಹಾಗೂ ನ್ಯಾಯಯುತ ವ್ಯಕ್ತಿ ರಾಜ್ಯಪಾಲರಾಗಿದ್ದಾಗ ಇಂತಹ ಮಹತ್ವದ ವೇಳೆಯಲ್ಲಿ ಈ ನಿರ್ಲಿಪ್ತ ಆಡಳಿತ ಸಾಧ್ಯ. ಮತದಾನ ನಂತರದ ಆಕ್ರಮಗಳನ್ನು ಎಲೆಕ್ಟ್ರಾನಿಕ್ ಮತಯಂತ್ರ ಈಗ ನಿವಾರಿಸಿಬಿಟ್ಟಿದೆ. ಈಗ ನಾನು ಮಾಡಿರುವ ಏಕಮಾತ್ರ ಸಲಹೆ ಜಾರಿಗೆ ಬಂದರೆ ಉಳಿದ ಅಕ್ರಮಗಳೂ ಕಣ್ಮರೆಯಾಗುತ್ತವೆ. ಚುನಾವಣೆ ಸಮಯದಲ್ಲಿ ರಾಜ್ಯಾಧಿಕಾರದ ಅನ್ಯಾಯದ ಅನಿಯಂತ್ರಣವಿಲ್ಲದೆ ಎಲ್ಲ ರಾಜಕೀಯ ಪಕ್ಷಗಳಿಗೂ ಸಮಾನ ಅವಕಾಶ ದೊರೆತು ಭಾರತೀಯ ಚುನಾವಣೆಗಳು ಶಾಂತಿಯುತ ಹಾಗೂ ನ್ಯಾಯಯುತವಾಗಿರುತ್ತವೆ.

(ಅನುವಾದ: ಖಾದ್ರಿ ಎಸ್. ಅಚ್ಯುತನ್)

ಜಾತಿಯ ಗಿರಿಗಿಟ್ಟಲೆಯಲ್ಲಿ ಭಾರತೀಯ

-ಪೂರ್ಣಿಮಾ. ಜಿ.

ಒಂದು ಮಗು ಶಾಲೆಗೆ ಹೋಗುವಾಗ ಕಲಿತಿತ್ತು-ಯಾವ ಜಾತಿ,ಮತ, ಪಂಥಗಳೂ ಇಲ್ಲ. ಇವೆಲ್ಲವನ್ನೂ ಮಾನವ ತನ್ನ ಅನುಕೂಲಕ್ಕಾಗಿ ಮಾಡಿಕೊಂಡಿರುವ ಒಂದು ಯಕಃಶ್ಚಿತ್ ಜೋಡಣೆ ಎಂದು. ಶಾಲೆಯಲ್ಲಿ ಕಲಿಸಿದ್ದರಾದ್ದರಿಂದ ಆಮಗು ಇದನ್ನು ಅಕ್ಷರಶಃ ಸತ್ಯ ಎಂದೇ ನಂಬಿತು. ಮನೆಯಲ್ಲಿ ಹಿರಿಯರಾರೂ ಆವಿಷಯದ ಬಗ್ಗೆ ತಲೆಕೆಡಿಸಿಕೊಳ್ಳುವಂತೆ ಕಾಣದ್ದರಿಂದ ಅದನ್ನು ಸತ್ಯವೇ ಎಂದು ನಂಬಿದ ಆ ಅಮಾಯಕ ಮಗು ಬೆಳೆಯುತ್ತಾ ಬೆಳೆಯುತ್ತಾ ಆ ಭಾವನೆಗಳನ್ನು ಹಾಗೆಯೇ ಬೆಳೆಸಿ ಕೊಂಡು ಹೋಗಿ ಹೆಮ್ಮರವಾಗಿಸಿಕೊಂಡಿತು. ಹರಯಕ್ಕೆ ಕಾಲಿಡುತ್ತಿದ್ದಂತೆ ಅದಕ್ಕೂ ತಿಳಿಯಿತು ಜಾತಿಗಳಿವೆ ಎಂದು. ಆದರೆ ಯಾವುವು?!- ಒಂದು ಗಂಡು, ಒಂದು ಹೆಣ್ಣುಎಂದು ತನ್ನ ವಿವೇಚನೆಗೆ ತಕ್ಕಂತೆ ತಿಳಿದುಕೊಂಡಿತು!!! ಇನ್ಯಾವ ಜಾತಿಗಳೂ ಆ ಮಗುವಿಗೆ ಕಾಣಲೇ ಇಲ್ಲ. ತನ್ನ ಗೆಳತಿಯರ ಮನೆಗಳಲ್ಲಿ ಇರುವ ಬೇರೆ ಬೇರೆ ಪೂಜಾ ವಿಧಾನಗಳನ್ನು ಕಂಡು ಎಲ್ಲರೂ ತಮ್ಮದೇ ಆದ ರೀತಿಯಲ್ಲಿ ಕಾಣದ ಆ ಭಗವಂತನನ್ನು ಆರಾಧಿಸುತ್ತಾರೆ. ಆದರೆ ಎಲ್ಲ ರೀತಿಯ ಆರಾಧನೆಗಳು ಸೇರುವುದು ಒಬ್ಬ ಭಗವಂತನನ್ನೇ ಎಂದುಕೊಂಡಿತು. ಏಕೆಂದರೆ ಹಾಗೆಯೇ ಹೇಳಿದ್ದರಲ್ಲಾ ಶಾಲೆಯಲ್ಲಿ!!! ಮಾನವ ಮೌಲ್ಯಗಳಲ್ಲಿ ಸಂಪೂರ್ಣ ನಂಬಿಕೆಯಿಟ್ಟು ಭಾವನಾತ್ಮಕ ಪ್ರಪಂಚದಲ್ಲಿ ಬೆಳೆದ ಆ ಮಗು ಹರೆಯದಲ್ಲಿ ಕಾಲಿಡುತ್ತಿದ್ದಂತೆಯೇ ಒಡನಾಡಿಯಾಗಿ ಬಂದ ಗೆಳೆಯನೊಬ್ಬನನ್ನು ಬಾಳಸಂಗಾತಿಯೆಂದು ಮನಸಾರ ಮೆಚ್ಚಿಕೊಂಡು ಪ್ರೇಮಬಂಧನದಲ್ಲಿ ಬಂಧಿಸಲ್ಪಟ್ಟ ಯುವತಿಯಾದಳು. ಆದರೆ ಅವನು ಬೇರೆ ಜಾತಿ ಎಂದರು ಮನೆಯವರು. 'ಹೌದು' ಒಪ್ಪಿದಳು ಆಕೆ. 'ಅವನು ಗಂಡಾಗಿರುವುದರಿಂದಲೇ ಅಲ್ಲವೇ ನಾನು ಅವನನ್ನು ವರಿಸಲು ಮುಂದಾಗಿರುವುದು'. 'ಹಾಗಲ್ಲ ಅವನು ನಂಬುವ ದೇವರು ಬೇರೆ'. 'ಉಹುಂ, ದೇವರು ಒಂದೇಯಾದರೆ ಪೂಜಿಸುವ ವಿಧಾನ ಬೇರೆ' ಪ್ರತಿಭಟಿಸಿದಳಾಕೆ. 'ಅದೆಲ್ಲಾ ಪುಸ್ತಕದ ಮಾತುಗಳು. ದಿನನಿತ್ಯದ

ಜೀವನದಲ್ಲಿ ಹಾಗಾಗದು' ಎಂದರೆಲ್ಲರೂ. ಈ ಮಾತಿನ ಅರ್ಥವೇ ಆಕೆಗೆ ತಿಳಿಯಲಿಲ್ಲ!!

ಪುಸ್ತಕದ ಮಾತಿಗೂ, ನಿಜಜೀವನಕ್ಕೂ ಅಜಗಜಾಂತರ ವ್ಯತ್ಯಾಸವಿರುವುದಾದರೆ ಪುಸ್ತಕಗಳನ್ನೇಕೆ ಓದಬೇಕು? ಓದಿ, ವಿದ್ಯಾವಂತರು ಪ್ರಜ್ಞಾವಂತರಾಗಿ ಎಂದು ಮಕ್ಕಳನ್ನು ಶಾಲೆಗೆ ಕಳುಹಿಸುವುದೇತಕ್ಕೆ? ಪ್ರಜ್ಞೆ, ಅರಿವು ಎಂಬ ಪದಗಳಿಗೆ ನಿತ್ಯದ ಬದುಕಿನಲ್ಲಿ ಏನಾದರೂ ಅರ್ಥವಿದೆಯೇ? ಬರಿದೇ ಡಿಗ್ರಿಗಳನ್ನು ಗಳಿಸಿ ಯಾವುದಾದರೊಂದು ನೌಕರಿ ಗಿಟ್ಟಿಸಿಕೊಂಡು ನಾಲ್ಕು ದುಡ್ಡು ಗಳಿಸಿದರೆ ಮುಗಿಯಿತೇ ಅಲ್ಲಿಗೆ ಬದುಕಿನ ಅರ್ಥ? ನಮ್ಮಗಳ ಮಧ್ಯವಿರುವ ಕಣ್ಣಿಗೆಕಾಣದ ಆದರೂ ಅಭೇದ್ಯವಾದ ಗೋಡೆಗಳನ್ನು ಬೀಳಿಸಲೋಸಗವಲ್ಲವೇ ಶಿಕ್ಷಣ ನಮಗೆ ಸಹಕಾರಿಯಾಗಬೇಕು? ಆದರೆ ಇಂದೇನಾಗುತ್ತಲಿದೆ? ಮೇಲೆ ಹೇಳಿದ ಆ ಹುಡುಗಿಯನ್ನು ಸಮಾಜ ಹೊಸಕಿಹಾಕಲು ಯತ್ನಿಸಿದಂತೆ ದಿನನಿತ್ಯವೂ ನಮ್ಮ ಸುತ್ತಮುತ್ತ ಇಂತಹವೇ ಘನಕಾರ್ಯಗಳು ನಡೆಯುತ್ತಲೇ ಇವೆ. ನಾವುಗಳು ಮಾತ್ರ ನರಸತ್ತ ಮೂಕಪ್ರೇಕ್ಷಕರಾಗಿ ನೋಡುತ್ತಲೇ ಇದ್ದೇವೆ. ಅಥವಾ ಬಂಡಾಯಕ್ಕೆ ಹೊರಟವರನ್ನು ಹುಚ್ಚರೆನ್ನುತ್ತಿದ್ದೇವೆ. ೨೧ನೆಯ ಶತಮಾನದಲ್ಲಿ ಕಾಲಿಟ್ಟಿದ್ದರೂ ಜಾತಿ ಯೆಂಬ ಕಾಳಿಂಗಸರ್ಪ ನೂರಾರು ಕಾರಣಗಳಿಂದ ಇನ್ನಷ್ಟು ಬಲವರ್ಧನೆಗೊಂಡು ತನ್ನ ವಿಷವನ್ನು ಎಲ್ಲೆಲ್ಲೂ ಪಸರಿಸುತ್ತಲಿದೆ.

ಜಾತ್ಯತೀತ ರಾಷ್ಟ್ರವಾಗಿ ಹೊರಹೊಮ್ಮಬೇಕಾಗಿದ್ದ ಈ ನಾಡು ವಿಶ್ವದಲ್ಲೇ ಅತಿ ದೊಡ್ಡ ಜಾತೀಯತೆಯನ್ನು ನೀರೆ(ರಕ್ಷಿಸಿ)ರೆದು ಪೋಷಿಸುವ ರಾಷ್ಟ್ರವಾಗಿ ಹೊರಹೊಮ್ಮಿದೆ. ಇಂದು ಎಲ್ಲಾ ಕಡೆಗೆ ಜಾತೀಯ ಬಣಗಳು ಹುಟ್ಟಿಕೊಂಡು ತಾವುಗಳೇ ಶ್ರೇಷ್ಠವೆಂದು ಪ್ರತಿಪಾದಿಸುತ್ತ ಎದುರಿಗಿರುವವನ ನಂಬಿಕೆಯನ್ನು ಕಿಂಚಿತ್ತೂ ಗೌರವಿಸದೇ ಮದಗಜಗಳಂತೆ ದೊಂಬಿಯೆಬ್ಬಿಸಿವೆ. ಹಿಂದೂ, ಮುಸ್ಲಿಂ, ಕ್ರೈಸ್ತನೆಂಬ ಮತ-ಪಥಗಳು ಸಾಲದೆಂಬಂತೆ ಅವರವರಲ್ಲಿಯೇ ಪುಟ್ಟಪುಟ್ಟ ಬಣಗಳು. ಆದರೆ ಯಾವುದೇ ಮತಸ್ಥರಿಗೆ ಮಾತನಾಡಲು ವೇದಿಕೆ ಸಿಗಲಿ ಹೇಳುವುದು ಎಲ್ಲರೂ ಒಂದೇ ಮಾತನ್ನೇ. ಎಲ್ಲರನ್ನೂ ಪ್ರೀತಿಯಿಂದ ಕಾಣಬೇಕು ಎಂದು. ನಿಜಕ್ಕೂ ನಾವು ಎಲ್ಲರನ್ನೂ ಪ್ರೀತಿಯಿಂದ ಕಾಣುತ್ತಿದ್ದೇವೆಯೇ? ಎದುರಿಗಿರುವ ವ್ಯಕ್ತಿಯ ನಂಬುಗೆ ನನ್ನದಕ್ಕಿಂತಲೂ ಭಿನ್ನವಾದುದಾದರೆ ನಾನು ಅವನೆಡೆಗೆ ನೋಡುವ ರೀತಿಯೇ ಬೇರೆಯಾಗುತ್ತದೆ. ಸಿಗಬಹುದಾದ ಎಲ್ಲ ಸಂದರ್ಭಗಳಲ್ಲಿ ನಿನ್ನ ನಂಬುಗೆ ಕಿರಿದು ನನ್ನ ನಂಬುಗೆ ಹಿರಿದು ಎಂಬುದನ್ನು ನಾವು

ಪ್ರತಿಪಾದಿಸುತ್ತಲೇ ಹೋಗುತ್ತೇವೆ. ಹೀಗಿರುವಾಗ ಪ್ರೀತಿ ತನ್ನ ನಿಜವಾದ ಅರ್ಥವನ್ನು ಕಳೆದುಕೊಳ್ಳುತ್ತದೆ. ಎದುರಿಗಿರುವ ವ್ಯಕ್ತಿ ಹೇಗಿದ್ದರೂ ಸರಿಯೇ ನಾನು ಅವನನ್ನು ಪ್ರೀತಿಸುವುದಾದರೆ ನಮ್ಮ ಭಿನ್ನಾಭಿಪ್ರಾಯಗಳನ್ನು ಪಕ್ಕಕ್ಕಿರಿಸಿ ತಿಳಿ ಮನಸ್ಸಿನಿಂದ ಪ್ರೀತಿಸಬೇಕು.

ಹಿಂದೊಮ್ಮೆ ಒಬ್ಬ ಕಿರಿಯ ಪಾದ್ರಿ ಒಬ್ಬ ಹಿರಿಯ ಪಾದ್ರಿಗೆ ಭಾರತೀಯರನ್ನೆಲ್ಲಾ ಕ್ರಿಶ್ಚಿಯನ್ ಮತಕ್ಕೆ ಮತಾಂತರಿಸಬೇಕಾದರೆ ಮೊದಲು ಗಾಂಧೀಜಿಯನ್ನು ಮತಾಂತರಿಸುವುದು ಸುಲಭೋಪಾಯ ಎಂದನಂತೆ. ಅದಕ್ಕೆ ಆ ಹಿರಿಯ ಪಾದ್ರಿ, ಗಾಂಧೀಜಿಯನ್ನು ನೀನು ಕ್ರೈಸ್ತನೆಂದು ಒಪ್ಪುವುದಿಲ್ಲವಾದರೆ ನೀನು ನಾನು ಕ್ರೈಸ್ತರು ಅಲ್ಲವೇ ಅಲ್ಲ ಎಂದನಂತೆ ಎಂತಹ ದೊಡ್ಡ ಮಾತು!!! ಯಾವುದೋ ಧರ್ಮದ ಚಿಹ್ನೆಗಳನ್ನು ನಾವು ಅಲ್ಲಲ್ಲಿ ಇಟ್ಟು, ಹಾಕಿಕೊಂಡು ಹಚ್ಚಿಕೊಂಡು ಓಡಾಡಿದರೆ ಆ ಧರ್ಮದವರಾಗುವುದಿಲ್ಲ. ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡು ಮುನ್ನಡೆದಾಗ ಮಾತ್ರ ನಾವು ನಂಬಿದ ಧರ್ಮಕ್ಕೆ ನಾವು ಕೊಡಬಹುದಾದ ಕೊಡುಗೆ ನೀಡಿದಂತೆ. ಎಲ್ಲರೂ ಮಹಾತ್ಮರಾಗಲು ಸಾಧ್ಯವಿಲ್ಲ. ಆದರೆ ಎಲ್ಲರಿಂದಲೂ ಪ್ರಯತ್ನ ಪಡುವುದಂತೂ ಖಂಡಿತವಾಗಿಯೂ ಸಾಧ್ಯ. ಆದರಿಂದು ನಾವುಗಳು ಹುಟ್ಟಿನಿಂದಲೇ ಬಂಧನಕ್ಕೊಳಗಾಗಿ ಎಂದೆಂದೂ ವಿಶ್ವಮಾನವರಾಗಿ ಬೆಳೆಯುವ ಗೋಜಿಗೇ ಹೋಗದೆ ಕೂಪ ಮಂಡೂಕ ದಂತೆ ನಮ್ಮ ನಮ್ಮ ಪರಿಧಿಗಳನ್ನು ನಿರ್ಮಿಸಿಕೊಂಡು ಅಲ್ಲಿಯೇ ಗೊಟರ್-ಗೊಟರ್ ಎನ್ನುತ್ತಾ ನಿಸ್ತೇಜರಾಗುತ್ತಿದ್ದೇವೆ. ವಿಶ್ವ ಮಾನವತಾವಾದವನ್ನು ಪ್ರತಿಪಾದಿಸಿದ ಮಹಾತ್ಮರೆಲ್ಲರೂ ಇಂದು ಒಂದೊಂದು ಬಣದ ಸೊತ್ತಾಗುತ್ತಲಿದ್ದಾರೆ. ನಮ್ಮಲ್ಲಿರುವ ಅವಿವೇಕದಿಂದ ಆ ಮಹಾನ್ ಚೇತನಗಳನ್ನು ಪರಿಧಿಗಳಲ್ಲಿ ಬಂಧಿಸಿ ನಾವು ಅವರಿಗೆ ದ್ರೋಹವೆಸಗುತ್ತಲಿದ್ದೇವೆ.

ಜಾತೀಯ ಭೂತಾರಾಧನೆ ಇಷ್ಟೊಂದು ಪ್ರಮಾಣಕ್ಕೆ ಬೆಳೆಯಲು ನಮ್ಮ ಸಂವಿಧಾನದಲ್ಲಿಯೇ ಲೋಪಗಳಿವೆಯೇನೋ ಎಂದೆನಿಸುತ್ತದೆ. ನಾವುಗಳು ಯಾವುದೇ ದಾಖಲಾತಿಗೋ, ನೌಕರಿಗೋ ಹೋದಾಗ ಬರೀ ಭಾರತೀಯ ಎಂದು ಹೇಳಿ ಕೊಂಡರೆ ದಾಖಲಾತಿ ಮಾಡಿ ಕೊಳ್ಳುವವರು ಅಥವಾ ನೌಕರಿಗಿಟ್ಟುಕೊಳ್ಳುವವರು ಖಂಡಿತವಾಗಿಯೂ ತೃಪ್ತರಾಗುವುದಿಲ್ಲ. ಜಾತಿ ಪ್ರಮಾಣಪತ್ರಗಳು, ಸಿಂಧುತ್ವ ಪ್ರಮಾಣಪತ್ರಗಳು ಅತ್ಯವಶ್ಯಕ. ಕಾಗದ-ಪತ್ರಗಳಾಗಿ, ಈ ಕಾಗದ-ಪತ್ರ ಗಳನ್ನು ಗಿಟ್ಟಿಸಲು ಏನೆಲ್ಲಾ

ಕಸರತ್ತನ್ನು ಜನರು ಮಾಡುತ್ತಿರುತ್ತಾರೆ. ತಾವೂ ಈ ಗುಂಪಿಗೆ ಸೇರ್ಪಡೆಯಾಗಬೇಕು ಎಂದು, ನಮ್ಮ ಸಮಾಜವನ್ನು ಈ ಗುಂಪಿಗೆ ಸೇರ್ಪಡೆ ಮಾಡಿಸುತ್ತೇವೆ ಎಂದು, ನಂಬಿಸಿ ಮತ ಗಿಟ್ಟಿಸುವ ಧುರೀಣರಿಗೇನೂ ಕಮ್ಮಿಯಿಲ್ಲ. ನೊಂದ ಜನಾಂಗಕ್ಕೆ ನ್ಯಾಯ ದೊರಕಿಸಿಕೊಡುವ ಹೆಸರಿನಲ್ಲಿ ನಾವು ಬಹುದೊಡ್ಡ ಭೇದ-ಭಾವದ ಕಂದರವನ್ನು ನಿರ್ಮಿಸುತ್ತಿದ್ದೇವೆ ಎಂದೆನಿಸುವುದಿಲ್ಲವೇ? ಮೊದಲಿನಿಂದಲೂ ಜಾತಿ ಎಂಬ ಭೇದ-ಭಾವದಿಂದ ದೂರವಿರಿ ಎಂದು ಮಕ್ಕಳಿಗೆ ಹೇಳಿ ಕೊನೆಗೆ ಅವರು ವಿದ್ಯಾಭ್ಯಾಸದ ಒಂದು ಘಟ್ಟವನ್ನು ಮುಗಿಸಿ ಸಮಾಜದಲ್ಲಿ ಕಾಲಿಡುವಾಗ, ನೀವುಗಳು ಯಾವುದಾದರೂ Category ಯಲ್ಲಿ ಬಂದು ಸರ್ಕಾರ ಕೊಡುವ ಸೌಲಭ್ಯಗಳನ್ನು ಪಡೆಯುವುದಾದರೆ ನಿಮ್ಮ ನಿಮ್ಮ ಜಾತಿ ಪ್ರಮಾಣ ಪತ್ರಗಳನ್ನು ಸಿದ್ಧ ಮಾಡಿಕೊಳ್ಳಿರಿ ಎಂದು ಹೇಳುವಾಗ General category ಯಲ್ಲಿ ಬರುವ ಮಕ್ಕಳ ಮುಖ ನೋಡಲು ಪಿಚ್ಚೆನಿಸುತ್ತದೆ. ಅತ್ಯಂತ ಬುದ್ಧಿವಂತ ಹಾಗೂ ಚುರುಕಿನ ವಿದ್ಯಾರ್ಥಿಗಳಾದರೂ ತಾವುಗಳು ಸೀಟು ಪಡೆಯುವಲ್ಲಿ ಅನುಭವಿಸಬೇಕಾದ ಕಷ್ಟದ ಛಾಯೆ ಅವರ ಮುಖದ ಮೇಲೆ ಸ್ಫುಟವಾಗಿ ವಿಧಿತವಾಗಿರುತ್ತದೆ. ಭೇದ-ಭಾವದ ವಿಷಬೀಜವನ್ನು ನಾವೇ ಬಿತ್ತುತ್ತಿಲ್ಲವೇ?

ನಿಜವಾಗಿಯೂ ಈ ದೇಶದ ಪ್ರಜೆಗಳು 'ಭಾರತೀಯ'ರಷ್ಟೇ ಆಗಿರಬೇಕೆಂದಾದರೆ, ನಮ್ಮಗಳ ಮಧ್ಯದ 'ಗೋಡೆಗಳು' ಕುಸಿಯಬೇಕೆಂದಾದರೆ ಆಗಾಗ ಗೋಡೆಯ ಕೆಲವು ಕಲ್ಲುಗಳನ್ನು ಉದುರಿಸಿದರೆ ಸಾಧ್ಯವೋ?

(ಸಾಭಾರ: ವಿಜಯ ಕರ್ನಾಟಕ)

* * *

ಜನಪದ ನಿಲಯದ ಅಂತರಂಗದಲ್ಲಿ.....6

-ಸು.ಕೌ.



೧೯೫೫ರಲ್ಲಿ ಮೇಲುಕೋಟೆ ಇಂದಿಗಿಂತ ಬಹಳ ಭಿನ್ನವಾಗಿರದೇ ಇದ್ದರೂ ಇಂದಿನ ಅನೇಕ ಆಧುನಿಕ ಸೌಕರ್ಯಗಳು ಆಗ ಇರಲಿಲ್ಲ. ಊರಿನ ಮುಖ್ಯ ರಾಜಬೀದಿಯನ್ನು ಬಿಟ್ಟರೆ ಉಳಿದ ರಸ್ತೆಗಳು ಅರ್ಧ ಚಪ್ಪಡಿ ಹಾಸುಗಳಿಂದಲೂ, ಅರ್ಧ ಮಣ್ಣು ರಸ್ತೆಗಳಿಂದಲೂ ಕೂಡಿದ್ದವು. ಮಗ್ಗದಕೇರಿ ಮತ್ತು ಕೊಟ್ಟಣಗೇರಿಗಳಲ್ಲಂತೂ ರಸ್ತೆಗಳೆಂದು ಕರೆಯಲು ಸಾಧ್ಯವಿಲ್ಲದಂಥ ರೀತಿಯಲ್ಲಿ ಅವು ಇದ್ದವು. ಸೈಕಲನ್ನು ಸಹ ತೆಗೆದುಕೊಂಡು ಹೋಗುವುದು ಕಷ್ಟವಾಗಿತ್ತು. ಆದರೆ ಮಗ್ಗದ ಕೇರಿಗೆ ಹೋದರೆ ಅಲ್ಲಿಯ ಎಲ್ಲಾ ಮನೆಗಳಿಂದ ನೇಯ್ಗೆಯ ಸದ್ದು ಕೇಳಿಬರುತ್ತಿತ್ತು. ಇಡೀ ವಾತಾವರಣವೇ ಬಹು ಚಟುವಟಿಕೆಯಿಂದ ಕೂಡಿರುತ್ತಿತ್ತು. ಮೇಲುಕೋಟೆ ಪಂಚೆಗಳು ತಯಾರಾಗುತ್ತಿದ್ದವು. ಮೇಲುಕೋಟೆ ಶ್ರೀ ನಾರಾಯಣಸ್ವಾಮಿಗೆ ತೊಡಿಸಲಾಗುತ್ತಿದ್ದ ಕೆಂಪು ಅಂಚಿನ ಪಂಚೆಯಂಥದ್ದನ್ನೇ ನೇಯುತ್ತಿದ್ದುದರಿಂದ ಅದಕ್ಕೆ ಮೇಲುಕೋಟೆ ಪಂಚೆ ಎಂದು ಹೆಸರು ಬಂದಿತ್ತು. ಆಗ ಈ ಪಂಚೆಯನ್ನು ನೇಕಾರರೂ ಮತ್ತು ಶ್ರೀವೈಷ್ಣವರೂ ಉಡುತ್ತಿದ್ದದ್ದು ವಿಶೇಷವಾಗಿತ್ತು. ನೇಕಾರರ ಸಹಕಾರ ಸಂಘದ ಮೂಲಕ ನೇಕಾರರಿಗೆ ಅವರಿಗೆ ಬೇಕಾದ ದಾರ ಸಿಗುತ್ತಿತ್ತು. ಒಂದಿಬ್ಬರು ವ್ಯಾಪಾರಸ್ಥರು ಸಹ ನೇಕಾರರಿಗೆ ದಾರ ಪೂರೈಸಿ ಪಂಚೆಗಳನ್ನು ಪಡೆಯುತ್ತಿದ್ದರು. ನೇಕಾರರು ಎಂದೂ ವ್ಯವಸಾಯ ಮಾಡಿದವರಲ್ಲ. ಯಾವಾಗಲೂ ನೇಯ್ಗೆಯನ್ನೇ ನೆಚ್ಚಿಕೊಂಡು ಬಾಳಿದವರು. ಅವರಲ್ಲಿ ಆರ್ಥಿಕವಾಗಿ ಉತ್ತಮವಾಗಿದ್ದ ಕೆಲವರು ಹೊಸಹೊಳಲು, ಅಕ್ಕಿಹೆಬ್ಬಾಳು ಕಡೆಯ ಹೇಮಾವತಿ ನೀರಾವರಿ ಪ್ರದೇಶದಲ್ಲಿ ರೈತರಿಗೆ ಸಾಲಕೊಟ್ಟು ಅದಕ್ಕೆ ಬದಲಾಗಿ ಭತ್ತ ಪಡೆಯುತ್ತಿದ್ದರು. ಮತ್ತೆ ಇನ್ನು ಕೆಲವು ನೇಕಾರರು ಮನೆಯಲ್ಲಿ ಹೊಲಿಗೆ ಯಂತ್ರವನ್ನಿಟ್ಟುಕೊಂಡು ಲಂಗ, ರವಿಕೆ, ನಿಕ್ಕರ್ ಇತ್ಯಾದಿಗಳನ್ನು ಹೊಲಿದು ಸುತ್ತಲಿನ ಸಂತೆಗಳಿಗೆ ಹೋಗಿ ಅವುಗಳನ್ನು ಮಾರಾಟಮಾಡಿ ಸ್ವಲ್ಪ ಮೇಲಾದಾಯವನ್ನು ಮಾಡಿಕೊಳ್ಳುತ್ತಿದ್ದರು. ಒಂದಿಬ್ಬರು ಶ್ರೀಮಂತ ನೇಕಾರ ಮನೆತನದವರು ರಾಗಿ ಹಿಟ್ಟು ಮಾಡುವ, ಭತ್ತದಿಂದ ಅಕ್ಕಿಮಾಡುವ ಮಿಲ್ಲನ್ನು ನಡೆಸುತ್ತಿದ್ದರು. ಕೆಲ ನೇಕಾರರು ಹಾರ್ಮೋನಿಯಂ, ತಬಲ, ಪಿಟೀಲು ಇತ್ಯಾದಿ ವಾದ್ಯಗಳನ್ನು ಚನ್ನಾಗಿ ನುಡಿಸುವುದನ್ನು ಬಲ್ಲವರಾಗಿದ್ದರಿಂದ ಅಕ್ಕ ಪಕ್ಕದ ಹಳ್ಳಿಯವರು ಶನಿಮಹಾತ್ಮೆ, ದಾನಶೂರಕರ್ಣನಂಥ ದೊಡ್ಡಾಟಗಳನ್ನು ಆಡಿದರೆ ಇವರು ಆ ನಾಟಕಗಳಲ್ಲಿ ವಾದ್ಯ ನುಡಿಸಲು ಹೋಗುತ್ತಿದ್ದರು. ಅದರಿಂದಲೂ ಕೆಲವರು ಸ್ವಲ್ಪ ಸಂಪಾದನೆ ಮಡುತ್ತಿದ್ದರು.

ನೇಯ್ಗೆಕೆಲಸದಲ್ಲಿ ಹೆಣ್ಣುಮಕ್ಕಳ ಪಾತ್ರ ದೊಡ್ಡದು ಅವರ ಸಹಾಯವಿಲ್ಲದಿದ್ದರೆ ನೇಕರ ಮಗ್ಗದ ಮೇಲೆ ಕೂತು ಲಾಳಿ ಎಸೆಯಲು ಸಾಧ್ಯವೇ ಇಲ್ಲ. ನೇಯ್ಗೆಗೆ ಬೇಕಾದ ಸಕಲ ಸಿದ್ಧತೆಗಳನ್ನು ಮನೆಯ ಹೆಂಗಸು ಅಥವಾ ಹೆಣ್ಣುಮಕ್ಕಳು ಮಾಡಿಕೊಡಬೇಕು. ನೇಯ್ಗೆ ಒಂದು ಕುಶಲ ಕಲೆಯಾಗಿರುವ ಕಾರಣದಿಂದಲೋ ಏನೋ ನೇಕಾರರ ಮನೆಗಳು ಯಾವಾಗಲೂ ಸ್ವಚ್ಛವಾಗಿರುತ್ತವೆ. ಚನ್ನಾಗಿ ಗುಡಿಸಿ ಸಾರಿಸಿದ ನೆಲ. ಅದರ ಮೇಲೆ ರಂಗವಲ್ಲಿ ಇದ್ದೇ ಇರುತ್ತದೆ. ಯಾರಾದರೂ ಅಥಿತಿಗಳು ಬಂದರೆ ಅವರು ಕೂರಲು ತಕ್ಷಣ ಚಾಪೆ ಹಾಸುತ್ತಾರೆ. ಚಾಪೆಗಳು ಉಪಯೊಗಕ್ಕೆ ತಕ್ಷಣ ಸಿಗುವಂತಿರಲೆಂದು ಅವುಗಳನ್ನು ಚೆನ್ನಾಗಿ ಸುತ್ತಿ ಮಗ್ಗದ ಮೇಲೆ ಎರಡು ಗಳುಗಳನ್ನು ಕಟ್ಟಿ ಅವುಗಳ ಮೇಲೆ ಅಡ್ಡಲಾಗಿ ಇಟ್ಟಿರುತ್ತಾರೆ. ಚಾಪೆಯಮೇಲೆ ಅತಿಥಿಗಳನ್ನು ಕೂರಿಸಿದ ಮೇಲೆ ಲೋಟದಲ್ಲಿ ಕಾಫಿ ಕೊಡುವುದನ್ನು ಮರೆಯುವುದಿಲ್ಲ. ಆಮೇಲೆ ಶುರುವಾಗುತ್ತೆ ಅವರ ವೃತ್ತಿಯಲ್ಲಿಯ ತೊಂದರೆಗಳ ರಾಮಾಯಣ. ಸ್ವಾತಂತ್ರ್ಯಬರುವುದಕ್ಕಿಂತ ಮೊದಲೂ ನೇಕಾರರಿಗೆ ಅನೇಕ ತೊಂದರೆಗಳಿದ್ದವು, ಸ್ವಾತಂತ್ರ್ಯಬಂದಮೇಲೂ ತೊಂದರೆಗಳಿವೆ. ನೇಕಾರರ ಮನೆಯ ಹೆಣ್ಣುಮಕ್ಕಳು ತಮ್ಮ ಆದಾಯಕ್ಕಾಗಿ ವರ್ಷವಿಡೀ ಊಟದ ಮತ್ತು ತಿಂಡಿಯ ಎಲೆಗಳನ್ನು ಹಂಚಿಕಡ್ಡಿ ಚುಚ್ಚಿ ತಯಾರಿಸುತ್ತಾರೆ. ಈ ಎಲೆಗಳು ಬಹಳ ಸುಂದರವಾಗಿಯೂ,ದೊಡ್ಡದಾಗಿಯೂ ಇರುತ್ತವೆ. ಆದ್ದರಿಂದ ಇವುಗಳಿಗೆ ಮೈಸೂರು ಮತ್ತು ಬೆಂಗಳೂರು, ಮಂಡ್ಯಾ ನಗರಗಳಿಂದ ಸಹ ಬೇಡಿಕೆ ಇರುತ್ತದೆ. ಊಟದ ಎಲೆಗಳ ಮಾರಾಟದಿಂದ ಬರುವ ಹಣವನ್ನು ಹೆಂಗಸರೇ ಇಟ್ಟುಕೊಳ್ಳುತ್ತಾರೆ. ಸಂಸಾರದಲ್ಲಿ ಬರುವ ಅನೇಕ ಚಿಕ್ಕ ಪುಟ್ಟ ಖರ್ಚುಗಳನ್ನು ಈ ಆದಾಯದಲ್ಲಿಯೇ ನಿರ್ವಹಿಸಿ ಗಂಡನ ತಲೆನೋವನ್ನು ಕಡಿಮೆಮಾಡುತ್ತಾರೆ.

ಮೇಲುಕೋಟೆಯನ್ನು ನನ್ನ ಕಾರ್ಯಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಳ್ಳಲು ಮುಖ್ಯವಾದ ಕಾರಣಗಳಲ್ಲಿ ಮೇಲುಕೋಟೆಯು ನೇಯ್ಗೆ ಕೈಗಾರಿಕೆಯುಳ್ಳ ಗ್ರಾಮವಾಗಿದ್ದು ಸಹ ಒಂದು. ಭಾರತದ ಪ್ರಾಚೀನ ಗುಡಿ ಕೈಗಾರಿಕೆಗಳಲ್ಲಿ ಒಂದಾದ ನೇಯ್ಗೆ ಉದ್ಯಮ ಮೇಲುಕೋಟೆಯಲ್ಲಿ ಹೇಗೋ ಜೀವ ಹಿಡಿದುಕೊಂಡು ಇದ್ದದ್ದು ನನಗೆ ವಿಶೇಷ ಆಕರ್ಷಣೆಯ ಸಂಗತಿಯಾಗಿತ್ತು. ನಾನು ನಂಬಿರುವ ಸರ್ವೋದಯ ಸಮಾಜ ವ್ಯವಸ್ಥೆಯಲ್ಲಿ ಗುಡಿ ಕೈಗಾರಿಕೆಗಳಿಗೆ, ಗ್ರಾಮೋದ್ಯೋಗಗಳಿಗೆ ಸಾಂಸ್ಕೃತಿಕ, ಮಾನವಿಕ, ಮತ್ತು ಆರ್ಥಿಕ ದೃಷ್ಟಿಯಿಂದ ಮಹತ್ವದ ಸ್ಥಾನವಿದೆ. ಆದ್ದರಿಂದ ನಾನು ಮೇಲುಕೋಟೆಗೆ ಬಂದು ನೆಲಸಿದಾಗ ಕೈಮಗ್ಗ ಕೈಗಾರಿಕೆ ನನ್ನ ಆಸಕ್ತಿ ಮತ್ತು ಗಮನವನ್ನು ವಿಶೇಷವಾಗಿ ಸೆಳೆಯಿತು ಮತ್ತು ನಾನು ಈ ಗ್ರಾಮದಲ್ಲಿ ಮಾಡಬಹುದಾದ ಕಾರ್ಯಕ್ಕೆ ಆಯಾಮವನ್ನು, ತಳಹದಿಯನ್ನು ಒದಗಿಸಬಹುದೆಂದು ಅನಿಸಿತು..........

(ಮುಂದುವರೆಯುವುದು)

ಗೊಂದಲದಲ್ಲಿ ಹಿಪ್ಯಾಟಿಟಿಸ್-ಬಿ-ಚುಚ್ಚುಮದ್ದು

–ಡಾ॥ ಗೊಪಾಲ ದಾಬಡೆ, ಶಾರದಾ ಗೋಪಾಲ,

ಭಾರತದಲ್ಲಿ ಹಿಪ್ಯಾಟಿಟಿಸ್–ಬಿ ಚುಚ್ಚುಮದ್ದಿನ ಪ್ರಚಾರ ಈಗ ಸುಮಾರು ಐದಾರು ವರ್ಷಗಳ ಹಿಂದೆ ಪ್ರಾರಂಭವಾಯಿತು. ರೋಟರಿಯಂಥ ಪ್ರತಿಷ್ಠಿತ ಸಾಮಾಜಿಕ ಸಂಸ್ಥೆಗಳು ಬಹಳ ಆಸಕ್ತಿಯಿಂದ ಈ ಚುಚ್ಚುಮದ್ದಿನ ಕ್ಯಾಂಪ್‌ಗಳನ್ನು ಏರ್ಪಡಿಸಿದವು. ಇನ್ನೂ ಆಗುತ್ತಿವೆ. ಮುನ್ನೂರೈವತ್ತು ರೂಪಾಯಿ ಬೆಲೆಯ ಲಸಿಕೆಗಳನ್ನು ಅರ್ಧಬೆಲೆಗೆ ಮಾಡಿ ಜನರಕೈಗೆಟುಕುವಂತೆ ಮಾಡುವಲ್ಲಿಯೂ ಈ ಸಂಸ್ಥೆಗಳು ಬಹಳ ಕಾರ್ಯ ಮಾಡಿದವು. ಹಿಪ್ಯಾಟಿಟಿಸ್ ಎಂದರೆ ಪಿತ್ತಕೋಶಕ್ಕೆ ಉರಿಬಾವು ಆಗುವುದು. ಪಿತ್ತಕೋಶಕ್ಕೆ ಸೋಂಕುತರುವ ಐದು ರೀತಿಯ ವೈರಾಣುಗಳಿವೆ. ಅದರಲ್ಲಿ ಎ ಮತ್ತು ಇ , ಇವು ನೀರು, ಆಹಾರದಿಂದ ಹರಡಿದರೆ ಉಳಿದವು ರಕ್ತದ ಸೋಂಕಿನಿಂದ ಹರಡುವ ಸಾಮಾನ್ಯ ಹಿಪ್ಯಾಟಿಟಿಸ್.

ನೀರು ಮತ್ತು ಆಹಾರಗಳಿಂದ ಹರಡುವ ಸಾಮಾನ್ಯ ಕಾಮಾಲೆಯ ಬಗ್ಗೆ ಎಲ್ಲರಿಗೂ ಪರಿಚಯ ಇದ್ದೇ ಇದೆ. ಇನ್ನುಳಿದವುಗಳಲ್ಲಿ ಈಗ ಬಹು ಪ್ರಚಾರದಲ್ಲಿರುವ ಹಿಪ್ಯಾಟಿಟಿಸ್–ಬಿ, ಏಡ್ಸ್ ರೋಗದಂತೆಯೇ ರೋಗಿಯ ರಕ್ತ ಅಥವಾ ದೇಹದ ದ್ರವ ಅಂಗಾಂಶಗಳು ಇನ್ನೊಬ್ಬರ ದೇಹವನ್ನು ಪ್ರವೇಶಿಸಿದಾಗ ಅವರಿಗೂ ರೋಗದ ಸೋಂಕು ತಗಲುವುದು. ರೋಗ ಹರಡುವ ವೇಗಮಾತ್ರ ಏಡ್ಸ್‌ಗಿಂತಲೂ ಜೋರು ಎನ್ನುತ್ತಾರೆ.

- ಈ ರೋಗವು, ತಾಯಿಗೆ ಇದ್ದರೆ, ಆಕೆ ಹಡೆಯುವಾಗಲೇ ಶಿಶುವಿಗೆ ತಗುಲುತ್ತೆ.
- ಒಬ್ಬರು ಬಳಸಿದ ಸೂಜಿಯನ್ನು ಇನ್ನೊಬ್ಬರು ಚುಚ್ಚಿಕೊಳ್ಳಲು ಬಳಸಿದಾಗ ಹರಡುತ್ತದೆ.
- ಅಸುರಕ್ಷಿತ ಲೈಂಗಿಕ ಸಂಪರ್ಕದಿಂದಲೂ ಇನ್ನೊಬ್ಬರಿಗೆ ದಾಟುತ್ತದೆ.
- ರಕ್ತದೊಟ್ಟಿಗೆ ಸಂಪರ್ಕ ಬರುವ ವ್ಯಕ್ತಿಗಳು, ಉದಾಹರಣೆಗೆ: ಬ್ಲಡ್ ಬ್ಯಾಂಕಿನಲ್ಲಿ ಕೆಲಸ ಮಾಡುವವರು, ಪದೇ ಪದೇ ರಕ್ತದಾನ ಮಾಡುವವರು, ಸ್ವೀಕರಿಸುವವರು, ಹಲ್ಲಿನ ಡಾಕ್ಟರ್‌ಗಳು ಇವರು ಹೆಚ್ಚು ಅಪಾಯದಲ್ಲಿ ಇರುತ್ತಾರೆ.

ಇದು ಒಂದೆರಡುವಾರ ಕಾಡುವ ರೋಗ, ಆರು ತಿಂಗಳಿಗಿಂತ ಹೆಚ್ಚುಕಾಲ ಇತ್ತೆಂದರೆ ಪಿತ್ತಕೋಶದಲ್ಲಿ ಹುಣ್ಣಾಗಿ ಕ್ಯಾನ್ಸರ್ ಆಗಬಹುದು. ಹಾಗೆ ಆದಾಗ ಮಾತ್ರ ರೋಗಿಯು ಬದುಕುವುದು ಕಷ್ಟ.

ರೋಗ ತಗುಲಿದ ಒಟ್ಟೂ ಜನರಲ್ಲಿ ಅವರವರ ಪ್ರತಿಬಂಧಕಶಕ್ತಿಯನ್ನನುಸರಿಸಿ ಕೇವಲ ೫% ಜನರಿಗೆ ರೋಗ ಮುಂದಿನ ಹಂತಕ್ಕೆ ಹೋಗಬಹುದು. ಆ ೫% ಜನರಲ್ಲಿ ಕಾಲು ಭಾಗ ಜನಕ್ಕೆ ಕ್ಯಾನ್ಸರ್ ಆಗಬಹುದು. ಒಮ್ಮೆ ಹಿಪ್ಯಾಟಿಟಿಸ್
ರೋಗ ಬಂದು ಆರಾಮುವಾದರೆಂದರೆ ಆ ವ್ಯಕ್ತಿಯಲ್ಲಿ ಜೀವನ ಪೂರ್ತಿ ರೋಗ ನಿರೋಧಕ ಶಕ್ತಿ ಇರುತ್ತದೆ.

ತಾಯಿಯಲ್ಲಿ ರೋಗಾಣುಗಳು ಇದ್ದವೆಂದರೆ ಮಾತ್ರ ಶಿಶುವಿಗೆ ಹುಟ್ಟುವಾಗಲೇ ರೋಗ ಜನ್ಮದತ್ತವಾಗಿ ಬರುತ್ತದೆ. ಆ ಮಗುವಿಗೆ ಶೈಶವಾವಸ್ಥೆಯಲ್ಲಿಯೇ ಹಿಪ್ಯಾಟಿಟಿಸ್-ಬಿ ಕಾಣಿಸಿಕೊಂಡಿತೆಂದರೆ ಅದರ ಪಿತ್ತಕೋಶ ಪೂರ್ತಿ ಹಾಳಾಗುವ ಸಂಭವವಿದೆ. ಇನ್ನಾವುದೇ ವಯಸ್ಸಿನ ರೋಗಿಗಳಲ್ಲಿ ಈ ಸಾಧ್ಯತೆ ಕಡಿಮೆ.

ರೋಗಿಗಳಲ್ಲಿ ನೂರಕ್ಕೆ ಹತ್ತು ಜನರಲ್ಲಿ ಮಾತ್ರ ರೋಗಾಣುಗಳು ಜೀವನಪೂರ್ತಿ ಇರಬಹುದು. ಹಿಪ್ಯಾಟಿಟಿಸ್-ಬಿ ರೋಗದಿಂದಲೇ ಸಾಯುವುದು ಬಹಳ ಕಡಿಮೆ.

ಆದರೆ ಔಷಧ ಕಂಪನಿಗಳು ಏಡ್ಸ್ ರೋಗವು ಒಂದು ವರ್ಷದಲ್ಲಿ ಕೊಲ್ಲುವಷ್ಟು ಜನರನ್ನು ಹಿಪ್ಯಾಟಿಟಿಸ್-ಬಿ ರೋಗವು ಒಂದೇ ದಿನದಲ್ಲಿ ಕೊಲ್ಲುತ್ತದೆ . ಎಂದು ಚಿಕ್ಕ ಪುಟ್ಟ ಕ್ಲಿನಿಕ್, ಆಸ್ಪತ್ರೆ, ಔಷಧ ಅಂಗಡಿಗಳಲ್ಲೂ ಜಾಹೀರಾತು ಹಾಕಿರುತ್ತವೆ. ಜನರನ್ನು ತಪ್ಪುದಾರಿಗೆಳೆಯುವ ಜಾಹೀರಾತುಗಳಿವು. ನಮ್ಮ ದೇಶದಲ್ಲಿ ಸಾಯುತ್ತಿರುವವರ ಸಂಖ್ಯೆ ನಮಗೆಲ್ಲಾ ಸಿಗುವುದೇ ಇಲ್ಲ. ಪುಣೆಯಲ್ಲಿನ ತಜ್ಞರು ಮಾಡಿರುವ ಒಂದು ಅಧ್ಯಯನದ ಪ್ರಕಾರ ರೋಗಿಗಳಲ್ಲಿ ೧.೪೨% ಜನರು ಮಾತ್ರ ರೋಗವಾಹಕರಾಗಿರುತ್ತಾರೆ. ಈ ಸಂಖ್ಯೆ ೨% ಇದ್ದಾಗ ದೇಶದಲ್ಲಿ ಎಲ್ಲರಿಗೂ ಲಸಿಕೆ ಹಾಕಿಸಬೇಕೆಂದು ವಿಶ್ವ ಆರೋಗ್ಯ ಸಂಸ್ಥೆಯು ಹೇಳುತ್ತದೆ.

ಎಲ್ಲಾ ದೇಶಗಳಲ್ಲೂ ಚುಚ್ಚುಮದ್ದು ಕಾರ್ಯಕ್ರಮದಲ್ಲಿ ಹಿಪ್ಯಾಟಿಟಿಸ್-ಬಿಯನ್ನು ಸೇರಿಸಿಕೊಳ್ಳಬೇಕೆಂದು ವಿಶ್ವಬ್ಯಾಂಕು ಎಲ್ಲಾ ದೇಶಗಳಿಗೂ ಮಾರ್ಗದರ್ಶಕ ಸೂತ್ರವನ್ನು ಕೊಟ್ಟುಬಿಟ್ಟಿದೆ. ಭಾರತ ಸರಕಾರವೂ ಕೂಡ ಇದನ್ನು ಹಂತ ಹಂತವಾಗಿ ಚಾಲನೆಗೆ ತರುತ್ತಿದೆ.

ಈ ಮಧ್ಯೆ ವಿಶ್ವಸಂಸ್ಥೆಯು ಖಾಸಗೀ ಮತ್ತು ಸಾಮುದಾಯಿಕ ಸಹಭಾಗಿತ್ವದ ಕಾರ್ಯಕ್ರಮವೊಂದನ್ನು ಜಾರಿಯಲ್ಲಿ ತಂದಿತು. ಏಡ್ಸ್‌ನಂಥ ಭಯಂಕರ ಖಾಯಿಲೆಗಳನ್ನು ಹೊಡೆದೋಡಿಸಲು ಶ್ರೀಮಂತ ದೇಶಗಳು ಮತ್ತು ಖಾಸಗಿಯವರ ಸಹಭಾಗಿತ್ವದಲ್ಲಿ ಚುಚ್ಚುಮದ್ದು, ಔಷಧಿಗಳನ್ನು ದೊರಕಿಸುವ ಕಾರ್ಯಕ್ರಮವಿದು. ಗ್ಲೋಬಲ್ ಅಲಾಯನ್ಸ್ ಫಾರ್ ವ್ಯಾಕ್ಸಿನೇಷನ್ ಅಂಡ್ ಇಮ್ಯೂನೈಸೇಷನ್ (GAVI) ಎಂಬ ಹೆಸರಿನ ಕಾರ್ಯಕ್ರಮದಲ್ಲಿ ಬಿಲ್ ಗೇಟ್ಸ್ ಅಂಥವರು ಹಣ ಕೊಡುತ್ತಿದ್ದಾರೆ. ಆದರೆ ಚುಚ್ಚುಮದ್ದು ಆರಂಭಿಸಲು ಮಾತ್ರ ಗಾವಿ ಹಣ ಕೊಡುತ್ತದೆ.

ಇಲ್ಲಿ ಏಳುವ ಪ್ರಶ್ನೆಗಳೆಂದರೆ ಹಿಪ್ಯಾಟಿಟಿಸ್-ಬಿ ಚುಚ್ಚುಮದ್ದು ಎಲ್ಲರಿಗೂ ಅವಶ್ಯಕವಿದೆಯೇ? ಅಥವಾ ಚುಚ್ಚುಮದ್ದಿಗಿಂತ ಮೊದಲು ರೋಗದ ಬಗ್ಗೆ ಜನರಿಗೆಲ್ಲಾ ಮಾಹಿತಿಗಳನ್ನು ತಲುಪಿಸುವುದು ಮುಖ್ಯವೇ?

ಒಂದೆರಡು ಸಾಧ್ಯಾಸಾಧ್ಯತೆಗಳನ್ನು ನೋಡಿ.

- ಗರ್ಭಿಣಿ ತಾಯಿಯಲ್ಲಿ ಹಿಪ್ಯಾಟಿಟಿಸ್-ಬಿ ರೋಗವಿತ್ತೆಂದರೆ ಹುಟ್ಟುವ ಶಿಶುವಿಗೆ ರೋಗವು ತಗಲುತ್ತದೆ. ರೋಗ ತಗುಲಬಾರದೆಂದರೆ ಅದು ಹುಟ್ಟಿದ ೨೪ ಗಂಟೆಯೊಳಗಾಗಿ ಲಸಿಕೆ ನೀಡಬೇಕು. ನಮ್ಮ ದೇಶದಲ್ಲಿ ೭೦%ಕ್ಕಿಂತ ಹೆಚ್ಚು ಹೆರಿಗೆಗಳು ಹಳ್ಳಿಯ ಮನೆಗಳಲ್ಲಿ, ಗುಡಿಸಲುಗಳಲ್ಲಿ, ಯಾವುದೇ ನರ್ಸ್-ವೈದ್ಯರ ಸಹಾಯವಿಲ್ಲದೇ ಜರುಗುವವು. ಇಂಥಲ್ಲೆಲ್ಲಾ ೨೪ ತಾಸಿನೊಳಗೆ ಲಸಿಕೆಯನ್ನು ತಲುಪಿಸುವುದು ಸಾಧ್ಯದ ಮಾತೇ?
- ರೋಗ ಹರಡುವ ಹೆಚ್ಚಿನ ಸಾಧ್ಯತೆಯುಳ್ಳ ಎರಡನೇ ಗುಂಪೆಂದರೆ ಬ್ಲಡ್ ಬ್ಯಾಂಕಿನವರು, ದಂತವೈದ್ಯರುಗಳು ಮತ್ತು ಮಾದಕ ಔಷಧಗಳನ್ನು ಚುಚ್ಚಿಕೊಳ್ಳುವವರು, ಅನೈತಿಕ ಲೈಂಗಿಕ ಸಂಪರ್ಕ ಮಾಡುವವರು. ಇವರು ಹಿಪ್ಯಾಟಿಟಿಸ್-ಬಿ ಲಸಿಕೆಯನ್ನು ತೆಗೆದುಕೊಳ್ಳಲೇ ಬೇಕು.
- ಇದು ಬಹಳ ದುಬಾರಿಯ ಚುಚ್ಚುಮದ್ದು. ಇಂದೇನೋ ಗಾವಿ ಎಂಬ ಸಂಸ್ಥೆ ಹಣಸಹಾಯ ಮಾಡಬಹುದು ಆದರೆ ಕಾರ್ಯಕ್ರಮ ಮುಂದುವರೆಸುವ ಜವಾಬ್ದಾರಿ, ಹೊಣೆಗಾರಿಕೆ ನಮ್ಮ ಸರಕಾರದ ಮೇಲೆಯೇ ನಿಲ್ಲುತ್ತದೆ. ಇಂದು ನಮ್ಮ ದೇಶದಲ್ಲಿ ಕ್ಷಯ ರೋಗದಿಂದ ಪ್ರತಿ ನಿತ್ಯ ಸಾವಿರಾರು ಜನ ಸಾಯುತ್ತಿದ್ದಾರೆ. ಚುಚ್ಚುಮದ್ದುಗಳಿಂದ ಆ ರೋಗವನ್ನು ತಡೆಯಲು ಇನ್ನೂ ಸಾಧ್ಯವಾಗಿಲ್ಲ ನಮಗೆ. ಅಲ್ಲಿ ನಮ್ಮ ಪ್ರಯತ್ನ ಇನ್ನೂ

ಜೋರಿನಿಂದ ಸಾಗಬೇಕೆ ಅಥವಾ ಲೆಖ್ಖ-ಸಂಖ್ಯೆಯೇ ಗೊತ್ತಿಲ್ಲದ ಹೊಸ ರೋಗದ ನಿವಾರಣೆಯ ದುಬಾರಿ ಕಾರ್ಯಕ್ರಮಕ್ಕೆ ಕೈಹಾಕಬೇಕೆ?

ಪ್ರತಿಷ್ಠಿತ ಸಂಘ ಸಂಸ್ಥೆಗಳು ಹಿಪ್ಯಾಟಿಟಿಸ್-ಬಿ ಚುಚ್ಚುಮದ್ದಿನ ಕ್ಯಾಂಪುಗಳನ್ನು ನಡೆಸುತ್ತವೆ. ಆ ಕ್ಯಾಂಪಿನಲ್ಲಿ ಗರ್ಭಿಣಿಯರ ರಕ್ತ ತಪಾಸಣೆ ನಡೆಯುವುದಿಲ್ಲ. ರೋಗದ ಬಗ್ಗೆ ಮಾಹಿತಿಯನ್ನೇನೂ ನೀಡಲಾಗುವುದಿಲ್ಲ. ನವಜಾತ ಶಿಶುಗಳಿಗೆ, ಅಥವಾ ರಕ್ತದ ಸಂಪರ್ಕದಲ್ಲಿ ಬರುವವರಿಗೆ ಎಂದು ಪ್ರತ್ಯೇಕ, ನಿರ್ದಿಷ್ಟ ಗುರಿ ಗುಂಪು ಇರುವುದಿಲ್ಲ. ಶಾಲೆಯ ಹುಡುಗರಿಗೆ, ವಯಸ್ಸಾದವರಿಗೆ ಯಾರ್ಯಾರಿಗೋ ಇರುತ್ತದದು. ಹೀಗೆ ಒಂದು ನಿರ್ದಿಷ್ಟ ಗುರಿ ಇಲ್ಲದೆಯೆ ರ್‍ಯಾಂಡಂ ಆಗಿ ಚುಚ್ಚುಮದ್ದು ಕೊಟ್ಟಾಗ ಅದು ಗುಂಪಿನಲ್ಲಿ ಗೋವಿಂದ ಆಗಿ ಬಿಡುತ್ತದೆ ಹೊರತು ಮೂಲ ಉದ್ದೇಶ, ಗುರಿಗಳನ್ನದು ಮುಟ್ಟುವುದಿಲ್ಲ. ಅತಿ ದುಬಾರಿಯ ಚುಚ್ಚುಮದ್ದನ್ನು ಹೀಗೆ ಪೋಲು ಮಾಡುವುದು ಎಷ್ಟು ಸರಿ?

ಹೀಗೆ ವ್ಯರ್ಥ ಕ್ಯಾಂಪುಗಳನ್ನು ಮಾಡುವ ಬದಲು ಅತಿ ಅವಶ್ಯಕತೆ ಇರುವ ನವಜಾತ ಶಿಶುಗಳಿಗೆ ಚುಚ್ಚುಮದ್ದು ನೀಡುವುದು ಅತೀ ಮಹತ್ವದ್ದು. ತಾಯಿಗೆ ಹಿಪ್ಯಾಟಿಟಿಸ್-ಬಿ ಇತ್ತಂದರೆ ಹುಟ್ಟುತ್ತಲೇ ಮಗುವಿಗದು ಅಂಟಿಕೊಳ್ಳುವುದರಿಂದ ಅಂಥ ನವಜಾತ ಶಿಶುವಿಗೆ ಲಸಿಕೆ ಕೊಡುವುದು ಅತಿ ಮಹತ್ವದ್ದು. ಆದರೆ ಚುಚ್ಚುಮದ್ದು ಬಹಳ ದುಬಾರಿ ಆಗಿರುವುದರಿಂದಲೂ ಮತ್ತು ಹೆರಿಗೆಗಳೆಲ್ಲ ಆಸ್ಪತ್ರೆಗಳಲ್ಲಿ ಆಗದಿರುವದರಿಂದಲೂ ಪರ್ಯಾಯ ಮಾರ್ಗವೊಂದನ್ನು ಹುಡುಕಿ ಯೋಗ್ಯರಿಗೆ ಲಸಿಕೆಯನ್ನು ತಲುಪಿಸುವುದು ಅತ್ಯವಶ್ಯವಿದೆ.

ಎಲ್ಲ ಸ್ತ್ರೀಯರನ್ನೂ ಹಿಪ್ಯಾಟಿಟಿಸ್-ಬಿ ರೋಗವಿದೆಯೇ ಎಂದು ಪರೀಕ್ಷಿಸುವುದು ಸಾಧ್ಯವೇ? ಇದು ಅಸಾಧ್ಯವಾದರೂ ಗರ್ಭಿಣಿ ಸ್ತ್ರೀಯರು ಟಿ.ಟಿ ಇಂಜಕ್ಷನ್, ಚೆಕ್ ಅಪ್‌ಗೆಂದು ಆಸ್ಪತ್ರೆಗಳಿಗೆ ಹೋಗುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವುದರಿಂದ ಅವರ ರಕ್ತ ಪರೀಕ್ಷೆ ಸಾಧ್ಯವಿದೆ. ಯಾವ ತಾಯಿಗೆ ರೋಗವಿದೆಯೋ ಗುರುರತಿಸಿ ಅವರ ಹೆರಿಗೆ ಸಮಯದಲ್ಲಿ ಡಾಕ್ಟರೋ, ನರ್ಸ್‌ಬಾಯಿಯೋ ಹಾಜರಿದ್ದು ಮಗುವಿಗೆ ಲಸಿಕೆ ಹಾಕಬೇಕು.

ಎರಡನೆಯದಾಗಿ ರೋಗ ತಗಲುವ ಸಾಧ್ಯತೆ ಇರುವಂಥ ಗುಂಪುಗಳಲ್ಲಿ ಇನ್ನೂ ಹೆಚ್ಚು ಒತ್ತಡ ಹಾಕಿ ಚುಚ್ಚುಮದ್ದು ಸಿಗುವಂತೆ ಮಾಡಬೇಕು. ಕ್ಯಾಂಪುಗಳ ಮೊದಲ ಗುರಿ ಗರ್ಭಿಣಿ ಸ್ತ್ರೀಯರಾಗ ಬೇಕು.

ಹಿಪ್ಯಾಟಿಟಿಸ್-ಬಿ ಇಂಜಕ್ಷನ್ ಖರೀದಿಗಾಗಿ (ಕೇವಲಖರೀದಿಗಾಗಿ) ಸರಕಾರ

ಇಂದು ಖರ್ಚು ಮಾಡುತ್ತಿರುವ ಹಣ ಕ್ಷಯರೋಗ ತಡೆ ನಿವಾರಣೆಗಾಗಿ ಹಾಕುತ್ತಿರುವ ಹಣಕ್ಕೆ ಸಮನಾಗಿದೆ. ಕ್ಷಯ ರೋಗದಿಂದ ಸಾಯುವವರ ಸಂಖ್ಯೆ ಪ್ರತಿ ವರ್ಷಕ್ಕೆ ೫೦,೦೦೦. ಹಿಪ್ಯಾಟಿಟಿಸ್-ಬಿಯ ಲೆಖ್ಖ ಸಂಖ್ಯೆಯೇ ನಮಗೆ ಗೊತ್ತಿಲ್ಲದಿರುವಾಗ ಇಡೀ ಚುಚ್ಚುಮದ್ದು ಕಾರ್ಯಕ್ರಮದಲ್ಲೇ ಅದಕ್ಕೆ ಮೊದಲ ಆದ್ಯತೆಯೇ? ಅದೂ ನಿರ್ದಿಷ್ಟ ಗುರಿಯೂ ಇಲ್ಲದೆಯೆ?

* * *

ಸಾವಯುವ ಕೃಷಿ ಹೊಸ ತಿರುವಿನಲ್ಲಿ

–ನಾಗೇಶ ಹೆಗಡೆ

ಜೀವಧಾರಕ ಕೃಷಿಯ ಮಹತ್ವವನ್ನು ಸರಕಾರ ಕೊನೆಗೂ ಅಧಿಕೃತವಾಗಿ ಒಪ್ಪಿಕೊಂಡಿದೆ. ಸಚಿವ ಎಚ್. ಕೆ. ಪಾಟೀಲರ ವಿಶೇಷ ಆಸಕ್ತಿಯಿಂದಾಗಿ ಕಳೆದ ವಾರ ಕರ್ನಾಟಕ ಸರ್ಕಾರ ಸಾವಯುವ ಕೃಷಿ ನೀತಿಯನ್ನು ಅಂಗೀಕರಿಸಿದೆ. ಅದನ್ನು ಸಾವಯುವ ಅನ್ನಿ, ಸುಸ್ಥಿರ ಕೃಷಿ ಅನ್ನಿ, ಇಲ್ಲವೆ ಜೀವಧಾರಕ ಕೃಷಿ ಅನ್ನಿ, ಸಾವಿರಾರು ವರ್ಷಗಳಿಂದ ನಡೆದುಬಂದ ಸಾಂಪ್ರದಾಯಿಕ ಕೃಷಿಗೆ ಈಗ ಸರಕಾರ ಮನ್ನಣೆ ನೀಡಲು ನಿರ್ಧರಿಸಿದೆ.

ಇದು ನಾಡಿನ ಕೃಷಿ ಚರಿತ್ರೆಯಲ್ಲಿ ಒಂದು ಮಹತ್ವದ ತಿರುವು ಎಂದೇ ಹೇಳಬೇಕು. ಕಳೆದ ಐವತ್ತು ವರ್ಷಗಳಿಂದ ಆಧುನಿಕ ಕೃಷಿಯ ಹೆಸರಿನಲ್ಲಿ, ಹಸಿರು ಕ್ರಾಂತಿಯ ಹೆಸರಿನಲ್ಲಿ, ಬೇಸಾಯ ಎಂಬುದು ದೊಡ್ಡ ರೈತರ, ಬಹುರಾಷ್ಟ್ರೀಯ ಕಂಪನಿಗಳ ಹಾಗೂ ಕೃಷಿ ವಿಜ್ಞಾನಿಗಳ ಆಡುಂಬೊಲವೇ ಆಗಿತ್ತು. ದೇಶವನ್ನು ಹಸಿವೆಯ ದವಡೆಯಿಂದ ಪಾರು ಮಾಡಿದ ಶ್ರೇಯ ಅದಕ್ಕೆ ಇದೆಯಾದರೂ, ಆ ಬಗೆಯ ಯಾಂತ್ರಿಕ ಕೃಷಿಗಾಗಿ ಅಪಾರ ಪ್ರಮಾಣದಲ್ಲಿ ರಸಗೊಬ್ಬರ, ಪೀಡೆನಾಶಕಗಳನ್ನು ಸುರಿಯಬೇಕಾಯಿತು. ಅದಕ್ಕೆಂದು ಭಾರೀ ಪ್ರಮಾಣದ ನೀರಾವರಿ ಯೋಜನೆಗಳನ್ನು ನಿರ್ಮಿಸಬೇಕಾಯಿತು. ಬಹಳಷ್ಟು ಕೃಷಿ ಭೂಮಿ ತನ್ನ ಸತ್ವವನ್ನು ಕಳೆದುಕೊಂಡಿತು. ಕೆಲ ಭಾಗದಲ್ಲಿ ಜವುಳು ತುಂಬಿ ನಿರುಪಯುಕ್ತವಾಯಿತು. ಜೀವವೈವಿಧ್ಯ ನಾಶವಾಯಿತು; ಅಸಂಖ್ಯ ಸ್ಥಳೀಯ ತಳಿಗಳು ಕಣ್ಮರೆಯಾದವು, ಅಂತರ್ಜಲ ಬರಿದಾಯಿತು. ನೀರು, ಮಣ್ಣು ಮಲಿನವಾಯಿತು. ರೈತಮಿತ್ರರೆನಿಸಿದ ಎರೆಹುಳು, ಜೇನ್ನೊಣ, ಪ್ರಾಣಿ ಪಕ್ಷಿಗಳು ನಿರ್ನಾಮವಾದವು.

ಅಷ್ಟೆಲ್ಲವನ್ನು ಬಲಿ ಕೊಟ್ರೂ ರೈತನಿಗೆ ನೆಮ್ಮದಿ ಇಲ್ಲವಾಯಿತು. ಕೃಷಿ ಎಂಬುದು ಹುಲಿ ಸವಾರಿ ಎಂಬತಾಯಿತು. ಸವಾರಿ ಮಾಡುವುದೂ ಕಷ್ಟ, ಇಳಿದರೆ ಇನ್ನೂ ಅಪಾಯ ಎಂಬಂತಾಯಿತು. ಕೃಷಿ ಒಳಸುರಿಗಳ ವೆಚ್ಚ ಅತಿಯಾಗಿದ್ದರಿಂದ ಸಾಲ–ಸೋಲಮಾಡಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಗೆ ಬಂವರು. ಕೆಮಿಕಲ್ ಬಳಕೆ ಅತಿ ಹೆಚ್ಚಾಗಿದ್ದ ಭಾರತೀಯ ಕೃಷಿ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ

ಕುಸಿಯತೊಡಗಿತು. ಚಹಾ, ಮಾವಿನ ಹಣ್ಣಿನಂತಹ ಕೆಲವು ಮಾಲುಗಳು ತಿರಸ್ಕೃತವಾಗಿ ಮರಳಿ ಬಂದವು. ಇಂಥ ಸ್ಥಿತಿಯಲ್ಲೂ ಸರಕಾರಕ್ಕೆ ಅದರ ಬಿಸಿ ತಟ್ಟಿರಲಿಲ್ಲ. ಆಡಳಿತಶಾಹಿಯ ಕಣ್ಣು ತೆರೆಯಲಿಲ್ಲ. ಕೃಷಿ ವಿ ವಿ ಗಳ ತಜ್ಞರು ಕೆಮಿಕಲ್ ಮಂತ್ರ ಜಪಿಸುವುದನ್ನು ಬಿಡಲಿಲ್ಲ.

ಅತ್ತ ವಿಜ್ಞಾನಿಗಳು, ದೊಡ್ಡ ಕಂಪನಿಗಳು ರೈತರಿಗೆ ಇನ್ನಷ್ಟು ಹೈಟೆಕ್ ಉಪಾಯಗಳನ್ನು ಹುಡುಕುತ್ತಲೇ ಹೋದವು. ಬಯೊಟೆಕ್ನಾಲಜಿ ಬಂತು. ಫಸಲಿನಲ್ಲೇ ವಿಷ ತುಂಬಿಕೊಂಡು ಕುಲಾಂತರಿ ಬೀಜಗಳು ಬಂದವು. ಬರದ ಬಾಧೆಯನ್ನು ಸಹಿಸಬಲ್ಲ ಹೊಸತಳಿಗಳು ಬಂದವು. ತರಾವರಿ ಎನ್‌ಸೈಮ್(ಕಿಣ್ವ)ಗಳು ಬಂದವು.

ಈ ಎಲ್ಲ ಅವಾಂತರಗಳ ಮಧ್ಯೆಯೂ ಅನೇಕ ಕಡೆ ಈಗಲೂ ರೈತರು ಹಳೆಯ ವಿಧಾನದ ದೊಡ್ಡಿ ಗೊಬ್ಬರ, ಪರ್ಯಾಯ ಬೆಳೆ, ಅಂತರಬೇಸಾಯ ಮುಂತಾದ ತಂತ್ರಗಳನ್ನೇ ನೆಚ್ಚಿಕೊಂಡಿದ್ದರು. ಇಳುವರಿಯನ್ನೂ ಚೆನ್ನಾಗಿ ಪಡೆಯುತ್ತಿದ್ದರು. ಫುಕುವೊಕನಂಥ ಕೃಷಿಋಷಿಗಳ ಕೃತಿಗಳು ಆಧುನಿಕ ಬೇಸಾಯದ ಕ್ರೌರ್ಯವನ್ನು ಎತ್ತಿ ಹೇಳಿದ ಮೇಲೆ ನಮ್ಮಲ್ಲೂ ಪ್ರಾಚೀನ ವಿಧಾನವನ್ನು ಬೆಂಬಲಿಸುವ ಉತ್ಸಾಹಿಗಳು ಹೆಚ್ಚಿದರು. ಎರೆಹುಳು ಸಂಗೋಪನೆ, ಜೇನು ಸಾಕಣೆ, ಸ್ಥಳೀಯ ಬೀಜರಕ್ಷಣೆ, ಜಲರಕ್ಷಣೆ ಮಾಡಬಲ್ಲ ಕೃಷಿಕರನ್ನು ಹಾಡಿ ಹೊಗಳಿ ಲೇಖನಗಳು ಬರತೊಡಗಿದವು.

ಈ ಮಧ್ಯೆ ಪಾಶ್ಚಾತ್ಯ ದೇಶಗಳಲ್ಲಿ ಸಾವಯುವ ಆಹಾರ ಪದಾರ್ಥಗಳಿಗೆ ಬೇಡಿಕೆ ಹೆಚ್ಚತೊಡಗಿತು. ರಾಸಾಯನ ದ್ರವ್ಯ ಬಳಸಿದ ಫಸಲಿಗಿಂತ ಸಾವಯುವ ಫಸಲು ಇಮ್ಮಡಿ, ಮುಮ್ಮಡಿ ಬೆಲೆ ಪಡೆಯತೊಡಗಿತ್ತು. ಹೆಸರಾಂತ ಪಾಶ್ಚಾತ್ಯ ಆಹಾರ ಮಳಿಗೆಗಳು ಹಿಂದುಳಿದ ದೇಶಗಳಲ್ಲಿ ಸಾವಯುವ ವಿಧಾನದಲ್ಲಿ ಪ್ರತ್ಯೇಕವಾಗಿ ಆಹಾರ ಪದಾರ್ಥಗಳನ್ನು, ಹಣ್ಣು ಹಂಪಲುನ್ನು ಬೆಳಸಿ ತಮ್ಮ ಅಂಗಡಿಗಳಲ್ಲಿ ಮಾರತೊಡಗಿದವು. ಸಾವಯುವ ಕೃಷಿ ಬಗ್ಗೆ ಅಲ್ಲಲ್ಲಿ ಸಂಶೋಧನೆಗಳು ನಡೆಯುತೊಡಗಿದವು.

ಒಂದು ಉದಾಹರಣೆ ನೋಡಿ: ಸ್ವಿಟ್ಸರ್ಲೆಂಡಿನ ಫ್ರಿಕ್ ಎಂಬಲ್ಲಿ ಸತತ ೨೧ ವರ್ಷಗಳ ಕಾಲ ಸಾವಯುವ ಕೃಷಿ ಸಂಶೋಧನೆ ಹೋಲಿಕೆಗೆಂದು ಅದೇ ಗಾತ್ರದ ರಾಸಾಯನಿಕ ಕೃಷಿ ನಡೆಸಿತು. ಜಗತ್ತಿನ ಅತಿ ದೀರ್ಘಾವಧಿಯ ಈ ಅಧ್ಯಯನದ ಫಲಿತಾಂಶ ಇಂತಿದೆ: ಇಳುವರಿಯಲ್ಲಿ ಒಂದೊಂದು ಫಸಲು ಒಂದೊಂದು ವಿಧ ಇತ್ತು. ಕಾಯಿಪಲ್ಲೆ ಇಳುವರಿ

ಎರಡರಲ್ಲೂ ಸಮಸಮ ಇದ್ದವು. ಗೋಧಿ ಶೇ. ೧೦ರಷ್ಟು ಕಮ್ಮಿ ಬಂತು; ಆಲೂಗಡ್ಡೆ ಶೇ.೪೦ ರಷ್ಟು ಬಂತು; ಆದರೆ ಇತರ ಲಾಭಗಳು ಹೇರಳ ಕಂಡು ಬಂದವು. ಅವೆಂದರೆ,

ಅರ್ಧದಷ್ಟೇ ಪೋಷಕಾಂಶ (ಸಾವಯವ ರೂಪದ ಸಾರಜನಕ, ಪೊಟ್ಯಾಶ್, ರಂಜಕ) ಸಾಕಾಯಿತು.

ಎರೆಹುಳಗಳ ಸಂಖ್ಯೆ ಮೂರು ಪಟ್ಟು ಹೆಚ್ಚಾಯಿತು. ಸಸ್ಯವರ್ಧನೆಗೆ ನೆರವಾಗುವ ಮೈಕೊರೈಝಾ ಶಿಲೀಂಧ್ರಗಳ ಪ್ರಮಾಣ ಶೇ. ೪೦ ರಷ್ಟು ಹೆಚ್ಚಾದವು.

ಒಟ್ಟಾರೆ ಮಣ್ಣಿನ ಗುಣಮಟ್ಟ ಉತ್ತಮವಾಯಿತು. ಸೂಕ್ಷ್ಮಾಣುಗಳ ಸಂಖ್ಯೆ ಹೆಚ್ಚಾಯಿತು. ಮಣ್ಣಿಗೆ ಚೈತನ್ಯ ಮರಳಿ ಬಂತು.

ಭಾರತದ ಪರಿಸರದಲ್ಲಿ ಸಾವಯುವ ಕೃಷಿ ಹೇಗೆ ಇನ್ನೂ ಲಾಭದಾಯಕ ಆಗಬಹುದು ಎಂಬುದಕ್ಕೆ ಅವರು ಮಧ್ಯಪ್ರದೇಶದ ಇಂದೂರ್ ಬಳಿಯ ಮಾಕಾಲ್ ಪ್ರಾಜೆಕ್ಟ್ ನ ಉದಾಹರಣೆ ನೀಡಿದ್ದಾರ. ಅಲ್ಲಿ ಒಂದು ಸಾವಿರಕ್ಕೂ ಹೆಚ್ಚು ಕೃಷಿಕರು ಸಾವಯುವ ಕೃಷಿಯಲ್ಲಿ ಸಂತೃಪ್ತಿ ಪಡೆದಿದ್ದಾರೆ ಎನ್ನಲಾಗಿದೆ.

ವಿಶ್ವಸಂಸ್ಥೆಯ ಆಹಾರ-ಕೃಷಿ ವಿಭಾಗದ (ಎಫ್ ಎಓ) ವರದಿಯ ಪ್ರಕಾರ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಾವಯುವ ಆಹಾರ ಉತ್ಪನ್ನಳಿಗೆ ಪ್ರತಿವರ್ಷ ಬೇಡಿಕೆ ಹೆಚ್ಚುತ್ತಿದೆ. ಮುಖ್ಯವಾಗಿ ಸಾವಯುವ ಅಕ್ಕಿ, ಚಹಾ, ಕಾಫಿ, ಹಣ್ಣು ಹಂಪಲು, ಮಸಾಲೆ ಸಾಮಗ್ರಿಗಳಿಗೆ ಬೇಡಿಕೆ ಹೆಚ್ಚಾಗಿದೆ.

ಈ ಸಂದರ್ಭದಲ್ಲಿ ಸಾವಯುವ ಕೃಷಿ ನೀತಿ ಜಾರಿಗೆ ಬಂದಿದೆ.

೧) ಸಾವಯುವ ಕೃಷಿಯಲ್ಲಿ ಮಾದರಿ ಕೆಲಸ ಮಾಡಿರುವ ರೈತರಿಗೆ ಸರಕಾರಿ ಸಮಿತಿಗಳಲ್ಲಿ ಸದಸ್ಯತ್ವಸಿಗುತ್ತದೆ; ೨) ಎರೆಗೊಬ್ಬರ, ನಾಟಿ ತಳಿ ಸಂರಕ್ಷಣೆ ಮುಂತಾದ ಕೆಲಸ ಮಾಡುತ್ತಿರುವ ಸ್ವಸಹಾಯ ಗುಂಪುಗಳಿಗೆ ಸರಕಾರಿ ನೆರವು ಸಿಗುತ್ತದೆ. ೩) ಸಾವಯುವ ಕೃಷಿಕರಿಗೆ ವಿಶೇಷ ಆದ್ಯತೆಯ ಸಾಲ ಸಿಗುತ್ತದೆ. ೪) ಅವರ ಫಸಲಿನಲ್ಲಿ ರಸಗೊಬ್ಬರ. ಕೀಟನಾಶಕ ಬಳಕೆ ಆಗಿಲ್ಲ ಎಂದು ಪ್ರಮಾಣ ಪತ್ರ ದೊರಕಿಸುವಲ್ಲಿ ಸರಕಾರ ನೆರವು ನೀಡುತ್ತದೆ. ೫) ಫಸಲಿನ ಸಂಸ್ಕರಣೆ ಹಾಗೂ ಮಾರಾಟ ಮಾಡಬಯಸುವ ಫಾರ್ಮರ್ಸ್ ಕಂಪನಿಗಳಿಗೆ ಮಾರುಕಟ್ಟೆ ಸೌಲಭ್ಯ ಸಿಗುತ್ತದೆ. ೬) ಪುರಾತನ ಕೃಷಿ ವಿಧಾನ ಕುರಿತು ಸಂಶೋಧನೆ ಮಾಡಬಯಸುವವರಿಗೆ ಉತ್ತೇಜನ, ಹಣಕಾಸಿನ

ನೆರವು ಸಿಗುತ್ತದೆ. ೭) ಸಾವಯುವ ಕೃಷಿ ಪದವಿಗಾಗಿ ಪಠ್ಯಪುಸ್ತಕ ಬರೆಯುವವರಿಗೆ, ಚಿತ್ರ ತಯಾರಕರಿಗೆ ಪ್ರತಿಫಲ ಸಿಗುತ್ತದೆ. ೮) ಮಾದರಿ ಕೃಷಿಕರ ತೋಟಗಳಲ್ಲಿ ಪ್ರವಾಸ ಮಾಡಬಯಸುವವರಿಗೆ ವ್ಯವಸ್ಥೆ ಮಾಡಲಾಗುತ್ತದೆ. ಇತ್ಯಾದಿ ಇತ್ಯಾದಿ.

ಈ ಯಾವ ಆಮಿಷವೂ ಇಲ್ಲದೆ, ಯಾವ ಕೃಷಿವಿಜ್ಞಾನಿಯ ಪ್ರೇರಣೆಯೂ ಇಲ್ಲದೆ ಇಂದು ಸಾವಿರಾರು ರೈತರು ತಮ್ಮಷ್ಟಕ್ಕೆ ಸಾವಯುವ ಕೃಷಿ ನಡೆಸಿದ್ದಾರೆ. ಅಂಥವರ ಸಾಧನೆಯನ್ನು ಸಮೀಪದಿಂದ ನೋಡುವ ಅವಕಾಶ ಸಿಕ್ಕಿದ್ದಕ್ಕೇ ಎಚ್.ಕೆ. ಪಾಟೀಲರು ಸಾವಯುವ ಕೃಷಿಗೆ ಸರಕಾರಿ ಮಾನ್ಯತೆ ದೊರಕಿಸಿಕೊಟ್ಟಿದ್ದಾರೆ.

ಆದರೆ ಸರಕಾರದ ಹಸ್ತಕ್ಷೇಪ ಆದಲ್ಲೆಲ್ಲ ಇದ್ದದ್ದೂ ಹಾಳಾಗುತ್ತದೆ ಎಂಬುದು ರೈತ ಸಮುದಾಯಕ್ಕೆ ಅನೇಕ ಬಾರಿ ಮನದಟ್ಟಾಗಿದೆ. ಅದು ಮಣ್ಣು ಸಂರಕ್ಷಣೆ ಇರಲಿ, ಕೆರೆ ಹೂಳೆತ್ತುವ ಕೆಲಸ ಇರಲಿ, ಅಥವಾ ಸರಕಾರಿ ಫಾರ್ಮ್‌ಗಳೇ ಇರಲಿ ಎಲ್ಲವೂ ನಗೆಪಾಟಲಿಗೆ ಗುರಿಯಾಗಿವೆ. ಈಗಂತೂ ಒಂದು ಕಡೆ ಸಾವಯುವ ಕೃಷಿಗೆ ಪ್ರೋತ್ಸಾಹ ಮತ್ತೊಂದು ಕಡೆ ಮಾನ್ಸಾಂಟೊ ಕಂಪನಿಗೆ ಆಶ್ರಯ, ಒಂದು ಕಡೆ ಜೀವದ್ರವ್ಯ ಸಂವರ್ಧನೆಯ ಕೆಲಸ, ಇನ್ನೊಂದು ಕಡೆ ಹೊಟ್ಟು ಸುಟ್ಟು ವಿದ್ಯುತ್ ಉತ್ಪಾದನೆ ಮಾಡುವ ಉದ್ಯಮಿಗಳಿಗೆ ಅನುಮತಿ.

ಈಗ ಸರಕಾರಿ ಸಾವಯುವ ಬಂಡಿಯಲ್ಲಿ ನುಗ್ಗಲು ಬಯಸುವವರ ಸಂಖ್ಯೆ ಹೆಚ್ಚಾದಂತೆಲ್ಲ, ಕೃಷಿಕರು ಹುಷಾರಾಗಿರಬೇಕು. ಆಯುರ್ವೇದ ಔಷಧಕ್ಕೆ ಬ್ರೂಫೆನ್ ಮಾತ್ರೆಯ ಪುಡಿ ಸೇರಿಸಿ ಮಾರುವವರ ಹಾವಳಿ ಹೆಚ್ಚಾದ ಹಾಗೆ ಎರೆಗೊಬ್ಬರಕ್ಕೆ ಯೂರಿಯಾ, ಗೋಮೂತ್ರಕ್ಕೆ ಮೊನೊಕ್ರೊಟೊಫಾಸ್ ಸೇರಿಸಿ ಮಾರುವವರ ಸಂಖ್ಯೆ ಹೆಚ್ಚಬಹುದು. ಅಂಥವರ ಮೇಲೆ ತೀವ್ರ ನಿಗಾ, ಬಿಗಿಯಾದ ಲಗಾಮು ಇಡಬೇಕು.

ಸಾವಯುವ ಕೃಷಿ ಎಂದರೆ ಅದೊಂದು ಜೀವನವಿಧಾನ. ಅದರಲ್ಲಿ ಸ್ವಾವಲಂಬನೆಗೆ, ಕೈಕೆಸರು ಮಾಡಿಕೊಳ್ಳ ಬಯಸುವವರಿಗೆ ಆದ್ಯತೆ ಇದೆ. ಚಿಕ್ಕ ಹಿಡುವಳಿದಾರರಿಗೆ ಹೇಳಿ ಮಾಡಿಸಿದ್ದು. ಹಸು, ಕೋಳಿ, ಜೇನು ಸಾಕಣೆ, ಎರೆಹುಳು ಸಂಗೋಪನೆ, ಕೃಷಿ ಅರಣ್ಯ, ಮಳೆಕೊಯ್ಲು ಮುಂತಾದ ಸಮಗ್ರ ಪರಂಪರೆ ಗ್ರಾಮೀಣ ಬದುಕಿಗೆ ಹತ್ತಿರವಾದದ್ದು. ಹಸಿರು ಕ್ರಾಂತಿಗೆ ಬಲಿಯಾಗದೆ ಈಗಲೂ ಬಹುಪಾಲು ಸಾವಯುವ ವಿಧಾನದಲ್ಲೇ ಕೃಷಿ ಮಾಡುತ್ತಿರುವವರಿಗೆ ಸುಲಭಸಾಧ್ಯವಾದುದು. ಈಗಾಗಲೇ ರಸಗೊಬ್ಬರ ಸುರಿದು ಭೂಮಿಯ ಸತ್ವವನ್ನೆಲ್ಲ ನಾಶಮಾಡಿಕೊಂಡ, ನೂರಾರು ಎಕರೆ

ವಿಸ್ತೀರ್ಣದ, ಯಾಂತ್ರಿಕ ವಿಧಾನದ ಬೇಸಾಯಮಾಡುವ ದೊಡ್ಡ ಹಿಡುವಳಿದಾರರಿಗೆ ಇದು ಸುಲಭಕ್ಕೆ ಎಟುಕುವಂಥದ್ದಲ್ಲ. ಅಂಥವರು ತಮ್ಮ ಭೂಮಿಯನ್ನು ಸಾವಯವಕ್ಕೆ ಸಜ್ಜುಗೊಳಿಸುವ ಮುನ್ನ ಮೂರು ನಾಲ್ಕು ವರ್ಷ ರಾಸಾಯನಿಕ ಕೃಷಿಗೆ ವಿದಾಯ ಹೇಳಬೇಕಾಗುತ್ತದೆ. ಸಾವಯುವ ಕೃಷಿಗೆ ಅಪಾರ ಜೀವದ್ರವ್ಯ, ಮಾಲಿನ್ಯರಹಿತ ಅಂತರ್ಜಲ ಬೇಕಾಗುತ್ತದೆ. ಆರಂಭಿಕ ಉತ್ಪಾದನೆಗೆ ಸತತ ಪರಿಶ್ರಮ, ಅಪಾರ ಸಮಯ ಬೇಕಾಗುತ್ತದೆ.

ಭೂಮಿ ತಾಳ್ಮೆಯನ್ನು ಬೇಡುತ್ತದೆ. ಇಂದಿನ ಜೀವನ ವಿಧಾನದಲ್ಲಿ ಅದು ನಮಗಿದೆಯೆ?

(ಪ್ರಜಾವಾಣಿ ಸಾಭಾರ)

ಪುಸ್ತಕ ಪರಿಚಯ

ಜಾಗೃತಿಯ ಹರಿಕಾರ ವೆಂಕಟಕೃಷ್ಣಯ್ಯ

ಲೇಖಕರು : ಹು.ಲ. ಶಾಸ್ತ್ರಿ

ಪ್ರಕಾಶಕರು : ದಯಾಸಾಗರ ವೆಂಕಟಕೃಷ್ಣಯ್ಯ ಸ್ಮಾರಕ ಟ್ರಸ್ಟ್, ಮೈಸೂರು.

ಪುಟಗಳು : ೧೯೬ ಬೆಲೆ : ೭೫ರೂ

ಪ್ರಕಟಣಾ ವರ್ಷ : ೨೦೦೨

ಕರ್ನಾಟಕದ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕೇಂದ್ರವೆಂದು ಹೆಸರಾಗಿರುವ ಮೈಸೂರು ನಗರ ಅನೇಕ ಸಾಹಿತಿಗಳನ್ನು, ಸಂಗೀತಗಾರರನ್ನು, ಕಲಾಕಾರರನ್ನು ಹೊಂದಿತ್ತೆಂಬ ಸಂಗತಿ ಎಲ್ಲರಿಗೂ ತಿಳಿದ ವಿಷಯ. ಆದರೆ ಓರ್ವ ಶ್ರೇಷ್ಠ ಸಮಾಜ ಸೇವಕನನ್ನೂ ಹೊಂದಿತ್ತೆಂಬುದು ಬಹಳ ಜನರಿಗೆ ಗೊತ್ತಿಲ್ಲ. ಮೈಸೂರಿನ ಲ್ಯಾನ್ಸ್ ಡೌನ್ ಕಟ್ಟಡದ ಎದುರಿಗಿನ ಸಣ್ಣ ಹೂದೋಟದಲ್ಲಿರುವ ಪ್ರತಿಮೆಯನ್ನು ಅನೇಕರು ಗಮನಿಸಿರಲಿಕ್ಕಿಲ್ಲ. ಏಕೆಂದರೆ ಈ ಶ್ರೇಷ್ಠ ಸಮಜಸೇವಕ ವೆಂಕಟಕೃಷ್ಣಯ್ಯ ಮಾನವ ಸೇವೆಯನ್ನಲ್ಲದೆ ಬೇರೆ ಯಾವ ಉದ್ದೇಶಗಳನ್ನೂ ತನ್ನ ಜೀವನದಲ್ಲಿ ಇಟ್ಟುಕೊಂಡಿರಲಿಲ್ಲ. ೧೮೪೪ರಲ್ಲಿ ಜನ್ಮತಾಳಿ ೧೯೩೩ರಲ್ಲಿ ಪಂಚಭೂತಗಳಲ್ಲಿ ಲೀನವಾಗುವವರೆಗೆ ೮೯ ವರ್ಷಗಳಷ್ಟು ದೀರ್ಘಕಾಲ ಸಮಾಜ ಸೇವೆಯನ್ನು ಮಾಡಿದಂತಹ ವ್ಯಕ್ತಿ ವೆಂಕಟಕೃಷ್ಣಯ್ಯನವರಲ್ಲದೆ ಬೇರೆ ಯಾರೂ ಇರಲು ಸಾಧ್ಯವಿಲ್ಲ. ಸ್ವಾತಂತ್ರ್ಯಾಂದೋಲನ ಕ್ಷೇತ್ರವಾಗಿದ್ದ ಸುಬ್ಬರಾಯನಕೆರೆ ಪಕ್ಕದಲ್ಲಿ ವೆಂಕಟಕೃಷ್ಣಯ್ಯನವರ ಜೀವನ, ಜೀವಿತೋದ್ದೇಶ ಮತ್ತು ಸಾಧನೆಯ ಸಂಕೇತವಾಗಿ ಅನಾಥಾಲಯ ಈಗಲೂ ನಿಂತಿದೆ. ಶ್ರೀವೆಂಕಟಕೃಷ್ಣಯ್ಯನವರು ತಮ್ಮ ಜೀವಿತಾವಧಿಯಲ್ಲಿ ಮಾಡಿದ ಸಾರ್ವಜನಿಕ ಕೆಲಸಗಳಿಗೆ, ಮಾಡಿದ ಪರೋಪಕಾರಗಳಿಗೆ ಲೆಕ್ಕವೇ ಇಲ್ಲ. ಅವರು ಅಂದಿನ ಎಲ್ಲಾ ದೊಡ್ಡ ವ್ಯಕ್ತಿಗಳ ಗೌರವಕ್ಕೆ ಪಾತ್ರರಾಗಿದ್ದರು. ಅವರ ಜೀವಿತಾವಧಿಯಲ್ಲಿ ಆಗಿಹೋದ ಎಲ್ಲಾ ಮಹಾರಾಜರ ಮತ್ತು ದಿವಾನರ ಗೌರವಗಳಿಗೆ ಅವರು ಪಾತ್ರರಾಗಿದ್ದರು. ಅವರ ಸಮಾಜಸೇವೆಯು ಮತ್ತು ರಾಜಕೀಯ ವಿಚಾರಗಳು ಅವರನ್ನು ಪತ್ರಿಕೋದ್ಯಮಕ್ಕೂ ಸಹ ಎಳೆದವು. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಪತ್ರಿಕೆಗಳನ್ನು ಹೊರಡಿಸಿದರು.

ಶ್ರೀ ಹು.ಲ.ಶಾಸ್ತ್ರಿಯವರು ಬರೆದಿರುವ ಶ್ರೀ ವೆಂಕಟಕೃಷ್ಣಯ್ಯನವರ ಜೀವನ ಮತ್ತು ಸಾಧನೆಗಳ ಜೀವನಚರಿತ್ರೆ ಓರ್ವ ಮಹಾವ್ಯಕ್ತಿಯ ಜೀವನಚರಿತ್ರೆಯಾಗುವುದರೊಂದಿಗೆ ೨೦ನೇ ಶತಮಾನದ ಮೈಸೂರು ನಗರದ ಸಾಂಸ್ಕೃತಿಕ ಜೀವನದ ಘಟನಾವಳಿಗಳನ್ನೂ ಸಹ ಹೊಂದಿದೆ. ಹೊಸ ಪೀಳಿಗೆಯವರು ಓದಲೇಬೇಕಾದ ಪುಸ್ತಕವಿದು.

***

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ವಾಚಕ ಮಿತ್ರರಲ್ಲಿ ವಿನಂತಿ

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ ೧೦೦/- ರೂ. ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

-ಪ್ರಕಾಶಕರು

ಕೆ. ಮೋಹನ್‌ರವರಿಗೆ ಕೃತಜ್ಞತೆ

ಜನಪದ ವಿಚಾರದ ಅಭಿಮಾನಿ ಓದುಗರಲ್ಲೊಬ್ಬರಾದ ಮೈಸೂರಿನ ಶ್ರೀ ಕೆ. ಮೋಹನ್‌ರವರು ಹದಿನೈದು ಮಿತ್ರರನ್ನು ಚಂದದಾರರನ್ನಾಗಿ ಮಾಡಿಕೊಟ್ಟಿದ್ದಾರೆ.

ತೆರೆದ–ಅಂಚೆ

KA-SKMND-470-2003-05
Regd. no. KAR/KAN/2000/3820

TO,

jANAPADA [illegible]HARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ® . Melkote. Dist- mandya – 571431
Phone : 08236 – 298754 e-mail : janapada@yahoo.com